
ಕೊರವಂಜಿ



ಡಿಸೆಂಬರ್ ೧೯೪೩

ಮಾಸ ಪತ್ರಿಕೆ

ಸಂಪಾದಕರು :
ಶ್ರೀ॥ ರಾ. ಶಿ.

ಚಿತ್ರಕಾರರು :
ಶ್ರೀ॥ ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ॥ ನಾ. ಕ.
ಶ್ರೀ॥ ಕೇಫ
ಶ್ರೀ॥ ಬೀರಣ್ಣ
ಶ್ರೀ॥ ಎಸ್. ಎನ್. ಶಿ.
ಶ್ರೀಮತಿ ಕೇಸರಿ
ಶ್ರೀಮತಿ ರುದ್ರಮ್ಮ
ಶ್ರೀ॥ ಖಾರಾಂತ
ಶ್ರೀ॥ ಗಂಗಾಧರ
ಶ್ರೀ॥ ಬುಳ್ಳ

ಬಿಡಿ ಪತ್ರಿಕೆ -- ಕೇವಲ ಎರಡಾಣೆ

ಶ್ರೀ ನಗೆಯ ಮಾಸ ಪತ್ರಿಕೆ.

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦

ಬಿಡಿ ಪ್ರತಿ ಕೇವಲ ಆಣೆ ೦—೨—೦

ವಿಷಯಾನುಕ್ರಮಣಿಕೆ

ಸಕಲವೂ ಪ್ರಿಯವಾದ

ಸಮರ ಕಾಲದಲ್ಲಿ

- ನಿಮಗೆ ಪ್ರಿಯವಾದ -

"ರಾಜಾ ಸ್ನೋ"

ವನ್ನು ಜಾಗರೂಕತೆಯಿಂದ ಉಪಯೋಗಿಸಿ

ಮಣ್ಯಂ ಮತ್ತು ಕಂಪೆನಿ

ಬೆಂಗಳೂರು, - - ಮದ್ರಾಸು

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ

ಕೂಡಿರುವುದೇ

ಬೆಂಗಾಲ್ ಲ್ಯಾಂಪ್ಸ್

ತಯಾರಿಕೆಯ ವೈಶಿಷ್ಟ್ಯ

ಭಾರತದಲ್ಲೆಲ್ಲಾ ಉತ್ತಮವಾದುದೆಂದು

ಖ್ಯಾತಿಪಡೆದಿದೆ

ಪಂತುಲಮ್ಮ

ಸಾರಥಿಯವರ ಉತ್ತಮ ತಯಾರಿಕೆ

— ದಿಗ್ದರ್ಶಕರು —

ಶ್ರೀ ರಾಮಬ್ರಹ್ಮಂ

● ● ●

ಮೂವಿಲ್ಯಾಂಡಿನಲ್ಲಿ

ಪ್ರದರ್ಶಿಸುವ ತಾರೀಖನ್ನು ಎದುರು ನೋಡಿ

ವಿವರಗಳಿಗೆ—

ಚಂದ್ರ ಫಿಲ್ಮ್ಸ್ ಲಿಮಿಟೆಡ್

ಗಾಂಧಿನಗರ, ಬೆಂಗಳೂರು

— ಇವರಿಗೆ ಬರೆಯಿರಿ

ಜಬ್ ಕೊ

ಸುಪ್ರಸಿದ್ಧ ಭಾರತೀಯ
ತಯಾರಿಕೆಗಳ ಅಂಕಿತ.
ಅವುಗಳು ಉತ್ಕೃಷ್ಟತೆ
ಬೆಲೆ ಇವುಗಳನ್ನು ಸರಿತೂಗಿಸುತ್ತವೆ.
ಪರದೇಶೀಯರಿಂದಲೂ
ಮನ್ನಣೆ ಪಡೆದಿರುವುವು.



ಕುಹಕಿಡಿಗಳು

ಮದ್ರಾಸಿನ ಮೇಲೆ ಬಾಂಬು ಬಿದ್ದರೆ, ನಮ್ಮೂರಿನ ಎ. ಆರ್. ಪಿ. ದಳದವರಿಗೆ ಸಂತೋಷವೆಂಬುದು ಶುದ್ಧ ಸುಳ್ಳು.

* * *

ಬಂಗಾಳಾ ಕ್ಷಾಮನಿವಾರಣೆಗೆ ಬೊಗಸೆ ಬೊಗಸೆ ಸಹಾಯ ಮಾಡಿದುದರಿಂದ, ಈಗ ನಮ್ಮೂರಲ್ಲಿ ಕ್ಷಾಮ ತಲೆದೋರುತಿದೆ ಎಂದು ಹೇಳುವುದು ಕೇವಲ ಕಲ್ಪನೀಯವೇ ಹೊರತು, ಯಥಾರ್ಥವಲ್ಲ.

* * *

ಹೋಟಲಿನವರ ಏಳಿಗೆಯನ್ನು ನೋಡಿದರೆ, ಖಂಡಿತವಾಗಿಯೂ ನಮ್ಮೂರಿನಲ್ಲಿ ಆಹಾರದ ಅಭಾವವಿಲ್ಲ ಎನ್ನಬೇಕು.

* * *

ಜಪಾನೀ ದಳಪತಿಯು ಈಗ ಅಂಡಮಾನ್ ದ್ವೀಪದಲ್ಲಿದ್ದಾನಂತೆ—ವೈಸರಾಯರು ಆತನನ್ನು ಅಲ್ಲಿಯೇ ಇರುವಂತೆ ಹುಕುಂ ಮಾಡಿದ್ದಾರೆಂಬುದು ಇನ್ನೂ ಖಚಿತವಾಗಿ ತಿಳಿದುಬಂದಿಲ್ಲ.

* * *

ದಂತ ವೈದ್ಯರೊಬ್ಬರು ಈಗ ಗಡಿಯಾರದ ರಿಪೇರಿ ಅಂಗಡಿಯೊಂದನ್ನು ತೆರೆದಿದ್ದಾರಂತೆ.

—ಅದರಲ್ಲೇನು ಸೋಜಿಗ! ಹಲ್ಲು ರಿಪೇರಿ ತಾನೇ ಆತ ಮುಂದುವರಿಸುವುದು.

✤ ✤ ✤

ಮಲೇರಿಯಾ ನಿವಾರಣೆಗೆಂದು, ಸೊಳ್ಳೆಗಳಿಗೆ ಸಂತಾನ ನಿರೋಧ ಹೇಳಿಕೊಡುತ್ತಾರೆಂಬುದು ಸುಳ್ಳಂತೆ.

✤ ✤ ✤

ಆಸ್ಟ್ರೇಲಿಯಾ ಮುಖ್ಯ ಮಂತ್ರಿಗಳು ಧಾನ್ಯವನ್ನು ಭಾರತಕ್ಕೆ ಕಳುಹಿಸಲು ಸಿದ್ಧರಾಗಿರುವರಂತೆ—ಹಡಗುಗಳು ದೊರೆತರೆ

—ಬೆಟ್ಟ ಎತ್ತಿ ತಲೆ ಮೇಲೆ ಇಟ್ಟರೆ 'ಹೊರುತ್ತೇನೆ' ಎಂದನಂತೆ ಜಟ್ಟಿ.

✤ ✤ ✤

———o———

ಸೈನ್ಯದವರ ಉಪಯೋಗಕ್ಕಾಗಿ ಟೀ ಸೊಪ್ಪಿನಿಂದ ತಯಾರಾದ—ಆದರೂ ಟೀ ಎಂದು ಗೊತ್ತಾಗದ........ಒಂದು ಪಾನೀಯವನ್ನು ಸಿದ್ಧಗೊಳಿಸಲು ಏರ್ಪಾಟಾಗುತ್ತಿದೆಯಂತೆ. ಇಂತಹ ಪಾನೀಯವನ್ನು ನಮ್ಮಾಕೆ ನಮಗೆ ದಿನವೂ ಕೊಡುತ್ತಿರುವರಲ್ಲಾ!

✤ ✤ ✤

ಕೇಂದ್ರ ಸರ್ಕಾರದ ಆಹಾರಮಂತ್ರಿಗಳ ಹೆಸರನ್ನು ಉತ್ತರ ಕರ್ನಾಟಕದ ಪತ್ರಿಕೆಗಳು ಶ್ರೀ ವತ್ಸವಾ ಎಂದೂ ಮೈಸೂರು ಕರ್ನಾಟಕದ ಪತ್ರಿಕೆಗಳು ಶ್ರೀವಾಸ್ತವ ಎಂದೂ ಅಚ್ಚುಹಾಕುತ್ತಿರುವುದರಿಂದ ಅವರ ವಾಸ್ತವವಾದ ಹೆಸರೇನೆಂದು ಜನಕ್ಕೆ ಕಳವಳ ಉಂಟಾಗಿದೆ.

✤ ✤ ✤

ಕೆಂಪು ಮುಸುಕಿನ ಸೀರೆಯಾಕೆಯು ಇನ್ನೊಬ್ಬಳೊಂದಿಗೆ ಮಾತನಾಡುತ್ತಾ 'ನೋಡೀ ಸುಬ್ಬಮ್ಮಾ, ಈ ಆಸ್ತಿ ವಿಮಾ ಹಣ ಇದು ಬರುವುದಕ್ಕೆ ಲಾಯರುಗಳ ಕಾಟ ನೋಡಿದರೆ, ಒಂದೊಂದು ಸರ್ತಿ ನಮ್ಮ ಯಜಮಾನರು ಬದುಕಿದ್ದರೇ ಚೆನ್ನಾಗಿತ್ತು ಅನ್ನಿಸುತ್ತೆ' ಎಂದರಂತೆ.

✤ ✤ ✤

ಉರಿಗಾಳು

ಹಿಂದೆ ಲಾರ್ಡ್ ಇರ್ವಿನ್‌ರವರು ಭಾರತ ಸಮಸ್ಯೆಯನ್ನು ಪರಿಹರಿಸಲು ಒಂದು ಕೈ ನೋಡಿದರು. ಈಗ ವೇವೆಲ್ಲರೂ ಒಂದು ಕಣ್ಣು ಬಿಡಲಿ!

✤ ✤ ✤

ಅಮೇರಿಕ ಐದನೆಯ ಸೈನ್ಯದ ಮಹಾ ದಂಡನಾಯಕರಾದ ಜನರಲ್ ಕ್ಲಾರ್ಕ್‌ರವರಿಗೆ ಇಟಲಿಯ ನೇಪಲ್ಸ್ ವಿಶ್ವವಿದ್ಯಾಲಯದವರು ರಾಜತಂತ್ರವಿಶಾರದ ಎಂಬ ಬಿರುದನ್ನು ದಯಪಾಲಿಸಿದರಂತೆ. ಇದರಿಂದ ನೇಪಲ್ಸ್ ವಿಶ್ವವಿದ್ಯಾನಿಲಯದವರಿಗೆ ರಾಜತಂತ್ರ ಗೊತ್ತಿದೆ ಎಂಬುದು ವಿಶದವಾಗುತ್ತದೆ.

✤ ✤ ✤

ಶ್ರೀ ಪಿಕ್ಚರ್ಸ್‌ರವರು ತಯಾರುಮಾಡಿರುವ "ರಾಮಾನುಜ" ಎಂಬ ಚಿತ್ರ ಸಮರ್ಪಕವಾಗಿಲ್ಲವೆಂದು ಸೌಂಡ್ ಪತ್ರಿಕೆ ಹೇಳುತ್ತದೆ...... ನಾಮದ ಪುಣ್ಯ!

✤ ✤ ✤

ಮೂಲಂಗಿ ಸೊಪ್ಪನ್ನು ತಂದು ತಲೆಯ ಮೇಲೆ ಹಿಂಡಿದರೆ ಹೇಳು ಸಾಯುವುದು ಎಂದು ಒಂದು ವೈದ್ಯಗ್ರಂಥದಲ್ಲಿ ಬರೆದಿದೆ. ನಮಗೇನೋ ಪಾದರಕ್ಷೆಯೇ ಸರಿ ಅನ್ನಿಸುತ್ತದೆ.

✤ ✤ ✤

"ಇತ್ತೀಚೆಗೆ ಸಂಗೀತ ಕಛೇರಿಗಳಲ್ಲಿ ಸಾರ್ವಜನಿಕರು ತಾಳ ಹಾಕುವುದು ಹೆಚ್ಚಾಗಿ ಹೋಗಿದೆ."

—ದಿನಪತ್ರಿಕೆ.

—ಇದಕ್ಕೂ ಆಹಾರ ಸಮಸ್ಯೆ ವಿಷಮಿಸಿರುವುದಕ್ಕೂ ಏನೋ ಸಂಬಂಧ ಇರಬೇಕು.

✤ ✤ ✤

ಮನೆ ಮಾಲೀಕನ ಮೂಗನ್ನು ಕಚ್ಚಿ ತುಂಡುಮಾಡಿದ ತಪ್ಪಿಗಾಗಿ ಒಬ್ಬ ಕಳ್ಳನನ್ನು ನಾಲ್ಕು ವರ್ಷದವರೆಗೆ ಕಾರಾಗೃಹಕ್ಕೆ ಕಳುಹಿಸಲಾಗಿದೆ.

—ದಿನಪತ್ರಿಕೆ.

—ಅಷ್ಟರೊಳಗೆ ಆತನ ಮೂಗು ಯಥಾಸ್ಥಿತಿಗೆ ಬೆಳೆದಿರುತ್ತದೆ, ಎಂದು ನಿರೀಕ್ಷಿಸಲಾಗಿದೆ.

ಬೆಪ್ಪುತಕ್ಕಡಿ

ಪ್ರಪಂಚದಲ್ಲಿ ಎಲ್ಲಕ್ಕೂ ಕಷ್ಟವಾದ ಕೆಲಸ ಅಂದರೆ ಬೇರೊಬ್ಬರನ್ನ ನಂಬಿಸೋದು. ಅದರಲ್ಲೂ ಸಾಮಾನ್ಯ ವಿಷಯಗಳಲ್ಲಿ ಇದ್ದದ್ದೂ ಕಷ್ಟ. ನೀವು ಬೇಕಾದರೆ ಪರೀಕ್ಷೆ ಮಾಡಿ—ಯಾರ ಹತ್ತಿರವಾದರೂ 'ಲಂಡನ್ನಲ್ಲಿ ಒಬ್ಬ ಮನುಷ್ಯ ಮುನ್ನೂರಡಿ ಮೇಲಿಂದ ಕೆಳಕ್ಕೆ ಬಿದ್ದು, ಎದ್ದು, ಒಂದು ಸಾರಿ ಕೆಮ್ಮಿ, ಏನೂ ತಿಳಿಯದಿದ್ದವನ ಹಾಗೆ ನಡೆದು ಹೋದ'ನಂತೆ ಅಂದರೆ ನಂಬುತ್ತಾರೆ. ಬೆಂಗಳೂರು ಕಬ್ಬನ್ ಪಾರ್ಕಿನ ಬೆಂಚಿಗೆ ಹೊಸದಾಗಿ ಬಣ್ಣ ಹಾಕಿದ್ದಾರೆ ಅಂದರೆ ಅದೇಕೆ ನಂಬಾರು? ಆ ಬೆಂಚಿನ ಮೇಲೆ ಕೂತು ಬಣ್ಣ ಮೆತ್ತಿಕೊಂಡ ನಿಮ್ಮ "ಇದ"ನ್ನೋ, ಬೆನ್ನನ್ನೋ ತೋರಿಸಿದರೆ, ಓಹೋ! ಇದ್ದರೂ ಇರಬಹುದು ಅಂದುಕೊಳ್ಳುತ್ತಾರೆ. ಅಥವಾ ಅವರೇ ಖುದ್ ಹೋಗಿ ಬೆಂಚನ್ನು ಮುಟ್ಟಿ ಮೂಸಿ ನೋಡಿ ನಿಜ ಎಂದುಕೊಳ್ಳಬಹುದು.

ನಾನು ಹೋದ ಭಾನುವಾರ ಕಬ್ಬನ್ ಪಾರ್ಕಿನ ಬೆಂಚಿನ ಮೇಲೆ ಒಬ್ಬನೇ ಮೆಲುಕು ಹಾಕುತ್ತಾ ಕೂತಿದ್ದೆ. ನನ್ನ ಪಕ್ಕಕ್ಕೆ ಒಬ್ಬ ವ್ಯಕ್ತಿ ಬಂದು ಕೂತ. ಆತನೇ ನನಗೆ ಮೇಲೆ ಹೇಳಿದ ಮಾತುಗಳನ್ನ ಹೇಳಿದ್ದು. ಅವನೊಬ್ಬ ದೊಡ್ಡ ಜ್ಞಾನಿ ಅಂತ ಆಗಲೇ ನನಗೆ ತಿಳಿಯಿತು. ಅವನು ಹೇಳಿದ ಮಾತಿನಲ್ಲಿ ಎಷ್ಟು ನಿಜವಿದೆಯೆಂದು ನನಗೆ ಕ್ಷಣಕ್ಷಣವೂ ಮನಸ್ಸಿನಲ್ಲಿ ನಾಟುತ್ತಿತ್ತು. ನನಗೂ ಒಂದೆರಡು ಬಾರಿ ಅನುಭವವಾಗಿದೆ. ಹಿಂದೆ ಒಂದು ಸಾರಿ ನನ್ನ ಸ್ನೇಹಿತ ರಾಜನ್ನ "ಮನೇಲಿ ಇಜ್ಜಲಿಲ್ಲವಯ್ಯಾ, ಒಂದೆರಡು ರೂಪಾಯಿ ಕೊಡು" ಅಂದೆ—ತಲೆ ಅಲ್ಲಾಡಿಸಿಬಿಟ್ಟ. "ಸ್ವಲ್ಪ ಇಜ್ಜಲನ್ನೇ ಸಾಲ ಕೊಡಯ್ಯಾ" ಅಂದೆ—'ಎಲ್ಲರ ಮನೆಯ ದೋಸೆಯೂ ತೂತೇ ಕಣೋ" ಅಂತ ಬುರುಡೆ ಹೊಡೆದ. ಅದೇ ನೋಡಿ ಹಿಂದೆ ಒಂದು ಸಾರಿ ಒಬ್ಬ ಹ್ಯಾಟ್ ಬೂಟ್ ಹಾಕ್ಕೊಂಡು, ತಾನೊಂದು ದೊಡ್ಡ ಕಂಪೆನಿ ತಗೀತೀನಿ, ಬೇಕಾದಷ್ಟು ಲಾಭ ಬರುತ್ತೆ, ಹಾಗೆ ಮಾಡ್ತೀನಿ, ಹೀಗೆ ಮಾಡ್ತೀನಿ ಅಂತ ಲಲ್ಲೆ ಹೊಡೆದ ಕೂಡ್ಲೆ ಆ ಬೆಪ್ಪುತಕ್ಕಡಿ ರಾಜ ಅವನ್ನ ನಂಬಿ ನೂರು ರೂಪಾಯಿದೊಂದು ಷೇರು ತಕೊಂಡ. ಇನ್ನೂ ಆ ಮನುಷ್ಯನೇ ಆಗಲಿ, ಆ ದುಡ್ಡೇ ಆಗಲಿ, ಆ ಕಂಪೆನಿಯೇ ಆಗಲಿ, ಪತ್ತೇ ಸಿಕ್ಕಿಲ್ಲ.

ಅದಿರಲಿ, ನಿಮ್ಮ ಹತ್ತಿರ ಏನು ಹೇಳೋಕೆ ಹೊರಟೆನೋ ಅದು ಮರೆತೇ ಬಿಟ್ಟೆ. ಅದೇ ಆ ಜ್ಞಾನಿ ನನ್ನ ಪಕ್ಕದಲ್ಲಿ ಕೂತಿದ್ದನಲ್ಲಾ—ಸ್ವಲ್ಪ ಹೊತ್ತಾದ ಮೇಲೆ ತನ್ನ ಜೇಬಿನಿಂದ ಒಂದು ಸಾಮಾನು ತೆಗೆದ. ಅದು ನೋಡೋಕೆ ಒಂದು ಹಳೇ ಜಪಾನು ಆಟದ ಸಾಮಾನಿದ್ದ ಹಾಗಿತ್ತು. ಅದಕ್ಕೆ ಒಂದು ಕೀಲು ಬೇರೆ.

ಅದನ್ನು ತಿರುಗಿಸಿದರೆ "ಕರ್‌ರ್‌ರ್" ಅಂತ ಶಬ್ದ ಬೇರೆ ಬಂತು. ನನಗೆ ಕುತೂಹಲವಾಗಿ ಏನದು ಅಂತ ವಿಚಾರಿಸಿದೆ. ಅದಕ್ಕವನು—"ಇದೇನು ಅಂತ? ನಾನೂ ಈ ಯಂತ್ರದ ಮೇಲೆ ಸಾಧಾರಣ ಹತ್ತು ವರ್ಷ ಕೆಲಸ ಮಾಡಿದೆ. ಇದರಿಂದ ಬೇಕಾದಷ್ಟು ದುಡ್ಡು ಸಂಪಾದನೆ ಮಾಡಿದೆ"—ಅಂದ. ನನಗೆ ಮತ್ತೂ ಆಸೆ ಹುಟ್ಟಿತು. ಮುಂದುವರೀತಾ "ನೋಡಿ, ಈ ಯಂತ್ರ ಬಹಳ ವಿಚಿತ್ರವಾದ್ದು. ದೂರದಲ್ಲಿ ಯಾರೇ ಆಗಲಿ, ಏನೇ ಆಗಲಿ, ಯಾವ ಕಡೆಗೇ ಹೋಗುತ್ತಿರಲಿ, ಈ ಯಂತ್ರಕ್ಕೆ ಕೀಲಿ ತಿರುಗಿಸಿ ತೋರಿಸಿದರೆ ತಗೊಳ್ಳಿ ಆ ಹೋಗುತ್ತಿರುವವರಿಗೆ ಒಂದು ತರಹ ಆವೇಶ ಬಂದು ದೌಡು ಓಡುತ್ತಾರೆ" ಅಂದ. ಅದರಿಂದ ಏನು ಪ್ರಯೋಜನವೋ ನನಗೆ ತಿಳಿಯಲಿಲ್ಲ. ಮತ್ತೆ ಹೇಳಿದ "ಈ ಕುದುರೆ ಜೂಜು ಆಗುತ್ತವಲ್ಲ! ಅದರಲ್ಲಿ ನಾವು ಯಾವ ಕುದುರೇನಾದ್ರೂ ಬ್ಯಾಕ್ ಮಾಡಿ, ಅದು ಓಡುತ್ತಿರುವಾಗ ಈ ಯಂತ್ರವನ್ನ ಕೀಲು ಕೊಟ್ಟು ಅದರ ಕಡೆ ತಿರುಗಿಸಿದರೆ—ನಾನು ಹೀಗೇ ಮಾಡಿ ಎಷ್ಟೋ ಜೂಜುಗಳಲ್ಲಿ ಕೊಳ್ಳೆ ಹೊಡೆದಿದ್ದೇನೆ" ಅಂದ. ನನಗಾವಾಗ ಆತನನ್ನ ನೋಡಿ ಎಷ್ಟು ಹೊಟ್ಟೆಕಿಚ್ಚು ಬಂತೋ! ಹೇಗಾದರೂ ಆ ಯಂತ್ರಾನ ಅವನ ಹತ್ತಿರದಿಂದ ಹೊಡೀಬೇಕು ಅಂತ ಮನಸ್ಸು ಮಾಡಿದೆ. ಮೆತ್ತಗೆ ಆತನನ್ನೇ ಕೇಳಿದೆ—ಅದರ ಬೆಲೆ ಎಷ್ಟಾಗಬಹುದು ಅಂತ ನನಗೆ ಅಂಥಾ ಯಂತ್ರವೊಂದರ ಆವಶ್ಯಕ ಪರಮಾತ್ಮನಿಗೇ ಗೊತ್ತು. ಸ್ವಲ್ಪ ಹೊತ್ತು ಹಾಗೇ ಮಾತನಾಡದೇ ಕೂತಿದ್ದೆವು. ನಾನವನ ಮುಖವನ್ನೇ ಆದರದಿಂದ ನೋಡುತ್ತಿದ್ದೆ. ಕಡೆಗೆ ಬಾಯಿ ಬಿಟ್ಟ! ನಾನು ಸುಸ್ತಾದೆ. ಸಾವಿರ ರೂಪಾಯಿ! ನನ್ನನ್ನೇ ಮಾರಿದರೂ ಸಾವಿರವೆಲ್ಲಿ ಬಂದೀತು? ಅದ್ಯಾರೋ ಒಬ್ಬ ವಿದ್ವಾಂಸ ಹೇಳಿದ್ದಾನಂತೆ. ಮನುಷ್ಯನ ದೇಹದಲ್ಲಿರುವ ವಸ್ತುಗಳನ್ನೆಲ್ಲಾ ಬೆಲೆ ಕಟ್ಟಿದರೆ—ಒಟ್ಟು ಜಾಸ್ತಿ ಎಂದರೆ ನಾಲ್ಕು ರೂಪಾಯಿ ಅಂತ. ಆದರೆ ನಾನು ಎತ್ತರವೂ ಕಡಿಮೆ. ಸುತ್ತಳತೆಯೂ ಕಡಿಮೆ. ಪ್ರಾಯಶಃ ಕ್ವಾಲಿಟಿ (quality) ಕೂಡ ಸ್ವಲ್ಪ ನುಟ್ಟ ಅಂತಾನೇ ಅನ್ನಬಹುದು. ಅಂದ ಮೇಲೆ ನನ್ನ ಬೆಲೆ ಬಹಳ ಅಂದರೆ ಒಂದೂವರೆ ರೂಪಾಯಿ ಅಂತ ಕಾಣುತ್ತೆ. ನನಗೆ ಬರೋ ಸಂಬಳ (ಯುದ್ಧದ ಪರಿಹಾರ ಸೇರಿಸಿಕೊಂಡು) ಇಪ್ಪತ್ತೇಳು.—೨೨ + ೫, ಇನ್ನು ಸಾವಿರ ರೂ. ಎಲ್ಲಿ ತರಲಿ? ನಿಟ್ಟುಸಿರು ಬಿಟ್ಟೆ. ಪಾಪ ಆತನಿಗೆ ಕನಿಕರ ಹುಟ್ಟಿತು ಅಂತ ಕಾಣುತ್ತೆ. "ಹೋಗಲಿ ನಿಮ್ಮ ಹತ್ತಿರ ಎಷ್ಟು ದುಡ್ಡಿದೇರೀ" ಅಂದ. ಆಗಿನ್ನೂ ತಾರೀಕು ಮೂರು. ನನ್ನ ಸಂಬಳದಲ್ಲಿ ರೂ. ೧೯ ಇನ್ನೂ ನನ್ನ ಹತ್ತಿರವೇ ಇತ್ತು. ಬಹಳ ನಾಚಿಗೆಯಿಂದ ನಿಜವನ್ನು ಹೇಳಿದೆ. ಅವನು ಮಾತಾಡಲಿಲ್ಲ.

ಅಷ್ಟು ಹೊತ್ತಿಗೆ ನಮ್ಮೆದುರಿನಲ್ಲಿ ಸ್ವಲ್ಪ ದೂರದಲ್ಲಿ ಯಾರೋ ಒಬ್ಬರು ನಡೆದು ಬರುತ್ತಿದ್ದರು. ನೋಡಿದರೆ ನಮ್ಮ ರಾಜ ಇದ್ದಹಾಗಿತ್ತು. ತಕ್ಷಣವೇ ನನ್ನ ಬೆಂಚಿನ ಸ್ನೇಹಿತ ತೆಗೆದ ತನ್ನ ಯಂತ್ರಾನ! ಅದಕ್ಕೆ ಕೀಲು ಕೊಟ್ಟು ತಿರುಗಿಸಿದ. ಅಬ್ಬ ಅದೇನು ಶಕ್ತಿ ಆ ಯಂತ್ರದ್ದು. ಪಾಪ ಆ ಮನುಷ್ಯನ

ಪಾಡೇನು? ಸುಂಟರ ಘಾಳಿಗೆ ಸಿಕ್ಕಿದ ಎಲೆಯ ಹಾಗೆ ಒದ್ದಲಾಡಿ ಒಂದೇ ಓಟದಲ್ಲಿ ಪರಾರಿ! ಇಷ್ಟು ಹೊತ್ತೂ ನನ್ನ ಕೈ ನನ್ನ ಜೋಬಿನಲ್ಲಿದ್ದ ನನ್ನ ದುಡ್ಡನ್ನು ಜಪಿಸುತ್ತಿತ್ತು. ಕಡೆಗೆ ಮನಸ್ಸು ತಡೆಯಲಾರದೆ—"ಒಂದೇ ಒಂದು ಜೂಜಿಗಾದರೂ ಆ ಮಹಾ ಯಂತ್ರವನ್ನು ಕೊಡಿ" ಅಂತ ಬೇಡಿಕೊಂಡು, ನನ್ನ ಕಷ್ಟಗಳನ್ನೆಲ್ಲಾ ಹೇಳಿಕೊಂಡು, ನನ್ನ ಹತ್ತಿರವಿದ್ದ ದುಡ್ಡೆಲ್ಲಾ ಅವನ ಕೈಲಿ ಕೊಟ್ಟೆ. ಅವನಿಗೆ ಅದೇನು ಮನಸ್ಸು ಬಂತೋ, ಆ ಯಂತ್ರಾನ ನನಗೆ ಕೊಟ್ಟು—ತಿರುಗಿ ಕೇಳಿದಾಗ ವಾಪಸ್ ಮಾಡುವ ಹಾಗೆ ಭಾಷೆ ತೆಗೆದುಕೊಂಡು—ಇಬ್ಬರೂ ಹೊರಟೆವು. ನನಗೆ ಮನೆಗೆ ಬರಲು ಆತುರ. ಅವಳಿಗೆ ತೋರಿಸಬೇಡವೇ? ಅದರೆ—ಸಾಮಾನು ತರೋಕೆ ಹೇಳಿದ್ದಳು! ಒಂದೆರಡು ದಿನ ಪಕ್ಕದ ಮನೇಲಿ ಸಾಲಾ ತರೋದು ಅಷ್ಟೇ! ಆ ಮೇಲೆ,—ಇನ್ನೇನು ಎರಡು ವಾರವಿದೆ ರೇಸು! ಅಂತೂ ಅಂತೂ ದಾರೀಲೆಲ್ಲಾ ಏನೇನೋ ತುಂಬಾ ಯೋಚನೆ ಮಾಡಿಕೊಂಡು ಮನೆಗೆ ಹೋದೆ. ಹೋದ ತಕ್ಷಣ ನನಗೆ ಹೇಳಲು ಬಾಯಿ ಬರಲಿಲ್ಲ. ಹೆದರಿಕೆ ಏನಲ್ಲ. ಅಂತೂ ಅದೇನೋ ಅವಳ ಮುಖ ನೋಡಿದ ತಕ್ಷಣ ಆ ಯಂತ್ರ ನನ್ನ ಜೇಬಲ್ಲೇ ಅವಿತುಕೊಂಡಿತು. ಎದೆಯಲ್ಲಿ ಒಂದು ತರಹ ಡಬ್‌ಡಬ್ ಅಂತಿತ್ತು. ನಾನು ಹೇಗೋ ಆಡಿರಬೇಕು. ಮೈ ಸ್ವಸ್ಥವಿಲ್ಲವೇ ಅಂದಳು ನನ್ನ ಧೈರ್ಯವೆಲ್ಲಾ ಮಾಯವಾಯಿತು. ಸ್ವಲ್ಪ ಹೊತ್ತಿಗೆ ರಾಜ ಬಂದ ನನಗೆ ಸ್ವಲ್ಪ ಜೀವ ಬಂತು. ರಾಜ ಖುಷಿಯಾಗಿದ್ದ. ಬಂದೋನೇ "ಲೋ ನನ್ನ ಬೆಪ್ಪುತಕ್ಕಡಿ ಅಂತೀಯಲ್ಲಾ ಇವತ್ತು ನೋಡೋ ಏನೂ ಶ್ರಮವಿಲ್ಲದೆ ೨ ರೂಪಾಯಿ ಹೊಡೆದೆ" ಅಂದ. ಅದು ಹೇಗೋ ಅಂದೆ" ನೋಡು ಕಬ್ಬನ್ ಪಾರ್ಕಿಗೆ ಹೋಗೋಣ, ನೀನೂ ಸಿಕ್ಕೀಯೇನೋ ಅಂತ ಹೊರಟೆ. ಸೆಂಟ್ರಲ್ ಜೈಲ್ ಹತ್ತಿರ ಒಬ್ಬ ಆಸಾಮಿ ಸಿಕ್ಕಿದ. ಹಾಗೇ ಮಾತಾಡುತ್ತಾ ಬಂದೆವು. ನೋಡೋದರಲ್ಲಿ ಸ್ವಲ್ಪ ಬೆಪ್ಪ ಇದ್ದಾಗಿದ್ದ. ಆಮೇಲೆ ಇದ್ದಕ್ಕಿದ್ದ ಹಾಗೇ ನನ್ನ ಕೈ ಹಿಡಿದು ಒಂದು ಮೆಹರ್ಬಾನಿ ಮಾಡಬೇಕೆಂದು ಕೇಳಿಕೊಂಡ. ಅದೇನಿಲ್ಲ: ತಾನು ಮುಂದೆ ಹೋಗುತ್ತೇನೆಂದೂ, ನಾನು ಹಿಂದುಳಿದು, ಸ್ವಲ್ಪ ಹೊತ್ತಾದ ಮೇಲೆ ಪಾರ್ಕಿಗೆ ನುಗ್ಗುವ ಸ್ಥಳದಲ್ಲಿ ತಲೆ ತಿರುಗಿದವನಂತೆ ನಟಿಸಿ, ಲೈಬ್ರೇರೀ ಕಡೆಗೆ ಓಡಬೇಕೆಂದೂ ಕೇಳಿಕೊಂಡ. ನನಗೇಕೋ ದಿಗ್ಭ್ರಮೆಯಾಯಿತು. ಜೇಬಿನಿಂದ ಎರಡು ರೂ· ತೆಗೆದು ನನ್ನ ಕೈಲಿಟ್ಟು ನಾನು ಏನೂ ಮರುಮಾತಾಡೋಕೇ ಬಿಡದೆ ಮುಂದೆ ನಡೆದ. ನಾನೇನು ಮಾಡಲಿ? ಏನೋ ಹುಚ್ಚು ಸಹವಾಸ ಅಂತ, ಎರಡು ರೂಪಾಯಿ ತೆಗೆದುಕೊಂಡ ತಪ್ಪಿಗೆ ನಾನೂ ಸ್ವಲ್ಪ ಹುಚ್ಚಾಟ ಆಡಿದೆ. ತಿರುಗಿ ಅವನ ಪತ್ತೆಯೇ ಇಲ್ಲ'' ಅಂದ.

ನಾನು ಮೂರನೇ ದಿನ ಬೆಳಿಗ್ಗೆ ಏಳೋ ಹೊತ್ತಿಗೆ ನನ್ನ ತಲೆ ಮೇಲೆ ತಣ್ಣೀರು ಬಟ್ಟೆ. ಬಟ್ಟೆ ಮೇಲೆ ಅವಳ ಕೈ. ಕಣ್ಣು ಬಿಡುತ್ತಲೇ—"ನಾನು

ಹೇಳಲಿಲ್ಲ? ನಿಮಗೆ ನೆನ್ನೇ ರಾತ್ರಿ ಮೈ ಸ್ವಸ್ಥವಿಲ್ಲ ಅಂತ ನನಗೆ ಗೊತ್ತು. ಥಾನು ವಾರ ಬಂತೂ ಅಂದ್ರೆ ಸರಿ—ಕಬ್ಬನ್ ಪಾರ್ಕು, ಲಾಲ್‌ಬಾಗ್ ಅಲಿಯೋದು, ಹಾಳೂ ಮೂಳೂ ತಿನ್ನೋದು. ಮನೇಲೇ ಇದ್ದು........"

"ಕಬ್ಬನ್ ಪಾರ್ಕ್ ಮನೆ ಹಾಳಾಯ್ತು, ಬಿಡೇ"—ಅಂದೆ.

"ಕಾಫೀ ಪುಡಿ ನೀವು ತರಲೇ ಇಲ್ಲ ನೆನ್ನೆ. ಹಾಲೇ ತಗೊಳ್ಳಿ" ಅಂತೆಂದಳು.

—ಕೇಫ.

—o—



"ತಾವು ಕನ್ನಡಕ ತೆಗೆದುಬಿಟ್ರೆ ಯಾರೂಂತ್ಲೆ ತಿಳಿಯೋಲ್ಲ."

"ನನಗೂ ಆಗ ಇತರರು ಯಾರೂಂತ್ಲೇ ತಿಳಿಯೋಲ್ಲ."

"ಕೆಲವಂ ಬಲ್ಲವರಿಂದೆ ಕಲ್ತು...!"

ಬಾಬರನಿಗೆ ಪಕ್ಷಿ ಭಾಷೆ ಗೊತ್ತಿತ್ತೆಂಬುದು ಇತಿಹಾಸ ಪ್ರಸಿದ್ಧವಾಗಿದೆ. ಹಾಗೆ ಪಕ್ಷಿ ಭಾಷೆಯನ್ನರಿತವರು ಇನ್ನೂ ಅನೇಕರಿದ್ದರು—ಈಗಲೂ ಇದ್ದಾರೆ. ಆದರೆ, ಇರುವೆಗಳ ಭಾಷೆಯನ್ನು ತಿಳಿದವನು ಸುಲ್ತಾನ್ ಮಹಮ್ಮದ್ ಬಿನ್ ತೊಗಲಕನೊಬ್ಬನೆ. ಅವನು ಇರುವೆಗಳ ದೇವತೆಯಿಂದ ವರಪಡೆದು ಆ ಭಾಷೆಯನ್ನು ತಿಳಿದುಕೊಂಡಿದ್ದನೆಂದು ಹೇಳುತ್ತಾರೆ.

ಇರುವೆಗಳು ಮನುಷ್ಯರಿಗಿಂತ ನಾಗರಿಕತೆಯಲ್ಲಿ ಎಷ್ಟೋ ಮುಂದುವರಿದಿವೆಯೆಂಬುದನ್ನು ವಿಜ್ಞಾನ ಶಾಸ್ತ್ರಜ್ಞರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಅವುಗಳ ಸಮಾಜ ನಿಯಮಗಳು, ರಾಜಕೀಯ (ಒಳದೇಶದ್ದು ಮತ್ತು ಅನ್ಯದೇಶ ಸಂಬಂಧದ್ದು), ಆರ್ಥಿಕ ಪದ್ಧತಿಗಳು, ಯುದ್ಧ ಚಾತುರ್ಯ ಇವೇ ಮುಂತಾದವು ನುರಿತ ಶಾಸ್ತ್ರಜ್ಞರನ್ನೂ ಕೂಡ ಅಚ್ಚರಿಗೊಳಿಸಿವೆ. ಆದುದರಿಂದಲೇ ಸಕಲಶಾಸ್ತ್ರ ಪಾರಂಗತನೂ, ದೂರದರ್ಶಿಯೂ ಆದ ಸುಲ್ತಾನ್ ಮಹಮ್ಮದ್ ಬಿನ್ ತೊಗಲಕನು ಇರುವೆಗಳ ವ್ಯವಹಾರ ವಿಧಾನಗಳನ್ನೆಲ್ಲಾ ಪರಿಶೀಲಿಸಿ ಅವುಗಳಲ್ಲಿರುವಂತೆಯೇ ತನ್ನ ರಾಜ್ಯಾಂಗವನ್ನೂ, ಮಾನವ ಸಮಾಜವನ್ನೂ ಉನ್ನತ ಸ್ಥಿತಿಗೆ ತರಬೇಕೆಂದು ಎಷ್ಟೋ ಪ್ರಯತ್ನಪಟ್ಟಿದ್ದ. ಅಜ್ಞರಾದ ಚರಿತ್ರಕಾರರು ಅವನನ್ನು ಅನ್ಯಾಯವಾಗಿ "ಹುಚ್ಚು ದೊರೆ" ಎಂದು ಕರೆದಿದ್ದಾರೆ. ಅವನಂತಹ ವಿವೇಕ ಶಿಖಾಮಣಿಯು ಪ್ರಪಂಚದಲ್ಲಿಯೇ ಇರಲಿಲ್ಲವೆಂಬುದು ಅವನಿಗೆ ಇರುವೆಗಳ ಭಾಷಾಪರಿಜ್ಞಾನವಿತ್ತೆಂಬ ರಹಸ್ಯವನ್ನರಿತ ಕೆಲವು ಸಂಶೋಧಕರಿಗೆ ಮಾತ್ರ ಗೊತ್ತುಂಟು. ದೆಹಲಿಯಿಂದ ದೇವಗಿರಿಗೆ ತನ್ನ ರಾಜಧಾನಿಯನ್ನು ಬದಲಾಯಿಸಲು ಪ್ರಯತ್ನ ಮಾಡಿದ ಕಾರಣವು ಚರಿತ್ರಕಾರರಿಗೆ ಅರ್ಥವಾಗದಿದ್ದರೂ, ಸುಲ್ತಾನನ ರಹಸ್ಯವನ್ನರಿತವರಿಗೆ ತಿಳಿದ ವಿಷಯ:

ಒಂದು ದಿನ ಇರುವೆಗಳ ಸಮಾಜದಲ್ಲಿ ಇದ್ದಕ್ಕಿದ್ದ ಹಾಗೆ ದೊಡ್ಡ ಕೋಲಾಹಲವೆದ್ದಿತು. ಭಯದಿಂದ ಇರುವೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಓಡತೊಡಗಿದ್ದವು. ಇದನ್ನು ಕಂಡು ವಿಸ್ಮಯಗೊಂಡ ಸುಲ್ತಾನನು ಹೀಗೇಕಾಯಿತೆಂದು ಪರೀಕ್ಷಿಸಿದಾಗ, ಒಂದು ಪ್ರಚಂಡ ಬಿರುಗಾಳಿಯು "ಥಾರ್" ಮರುಭೂಮಿಯಲ್ಲಿ ಉತ್ಪನ್ನವಾಗಿ ದೆಹಲಿಯ ಕಡೆಗೆ ಬೀಸಲಿರುವುದೆಂದೂ, ಅದರಿಂದ ದೆಹಲಿಯೆಲ್ಲವೂ ನಾಶವಾಗಿ ಒಂದು ಮರಳುಕಾಡಾಗಿ ಹೋಗುವ ಸಂಭವವುಂಟೆಂದೂ ಯಮುನಾ ನದಿಯೂ ಸಹ ಬತ್ತಿಹೋಗಬಹುದು, ಇಲ್ಲವೇ ಅದರ ಪಾತ್ರವೇ ಬದಲಾಯಿಸಿಬಿಡಬಹುದೆಂದೂ, ಹೀಗಾಗಿಬಿಟ್ಟರೆ, ಇರುವೆಗಳ ವಂಶವೇ ನಿರ್ನಾಮವಾಗುವುದೆಂದೂ ಅದಕ್ಕಾಗಿಯೇ ಅವೆಲ್ಲಾ ದೆಹಲಿಯನ್ನು ಬಿಟ್ಟು ದೇವಗಿರಿ ಕಡೆಗೆ ತಂಡೋಪತಂಡವಾಗಿ

ಹೊರಡುವುದಕ್ಕಣಿಮಾಡಿಕೊಳ್ಳುತ್ತಿದ್ದು
ವೆಂದೂ ಕಂಡುಬಂದಿತು. ಆಗಲೇ ದೂರ
ದರ್ಶಿಯಾದ ಸುಲ್ತಾನನು ಒಡನೆಯೇ
ಎಲ್ಲರೂ ರಾಜಧಾನಿಯನ್ನು ಬಿಟ್ಟು ದೇವ
ಗಿರಿಗೆ ಹೋಗಬೇಕೆಂದು ಆಜ್ಞೆ
ಯಿತ್ತುದು. ತಡಮಾಡಿದವರನ್ನು
ಅವರ ಹಿತಕ್ಕಾಗಿಯೇ ಬಲವಂತದಿಂದ
ರವಾನೆ ಮಾಡಿಸಿದನು. ಬಿರುಗಾಳಿಯು
ಬಂದೂಬಂದಿತು. ಆದರೆ, ದೈವವಶಾತ್
ಅದರ ಪ್ರಚಂಡ ಮಾರುತವು ಸ್ವಲ್ಪ
ಉತ್ತರಕ್ಕೆ ಬದಲಾಯಿಸಿದುದರಿಂದ
ದೆಹಲಿಗೆ ಸ್ವಲ್ಪ ನಷ್ಟವುಂಟಾದರೂ,
ಪಟ್ಟಣವು ಉಳಿದುಕೊಂಡಿತು. ಆದರೆ,
ಕುರುಕ್ಷೇತ್ರವು ಮಾತ್ರ ಅದರ ಭರಾಟಿಗೆ
ಸಿಕ್ಕಿ ಸಸ್ಯಾದಿಗಳೆಲ್ಲ ನಾಶವಾಗಿ
ನಿರ್ಜೀವ ಭೂಮಿಯಾಗಿ ಹೋಯಿತು.
ಆ ಸ್ಥಳವು ಈಗಲೂ ಒಂದು ಬಂಜರು
ಪ್ರದೇಶವಾಗಿದೆಯೆಂಬುದು ಎಲ್ಲರಿಗೂ
ತಿಳಿದ ವಿಷಯವೇ ಆಗಿದೆ. ಬಿರು
ಗಾಳಿಯ ರಭಸವು ಮುಗಿದ ನಂತರ
ಯಮುನೆಯ ಪಾತ್ರವು ಅಷ್ಟೇನೂ ಬದ
ಲಾಯಿಸದಿರುವುದನ್ನು ಕಂಡು ಇರುವೆ
ಗಳೆಲ್ಲಾ ಇನ್ನು ಅಪಾಯವಿಲ್ಲವೆಂದರಿತು
ದೆಹಲಿಗೇ ಹಿಂತಿರುಗಿದವು. ಅಂತೆಯೇ
ಸುಲ್ತಾನನೂ ಸಹ ಕಷ್ಟಪಡುತ್ತಿದ್ದ
ತನ್ನ ಪ್ರಜೆಯನ್ನೆಲ್ಲಾ ಅತ್ಯಂತ ಕರುಣೆ
ಯಿಂದ ಸುರಕ್ಷಿತವಾದ ದೆಹಲಿಗೇ
ಹಿಂದಕ್ಕೆ ಕರೆಸಿದನು. ನಿಜಾಂಶವನ್ನರಿ
ಯದ ಚರಿತ್ರಕಾರರು ಈ ವಿಚಾರದಲ್ಲಿ
ಸುಲ್ತಾನನ ಮೇಲೆ ಸಲ್ಲದ ಆರೋಪಣೆ
ಗಳನ್ನೆಲ್ಲಾ ಮಾಡಿದ್ದಾರೆ.

ಪ್ರಕೃತದಲ್ಲಿ: ಪ್ರಾಕ್ತನ ಶೋಧನ
ಕಾರರು ಮಹಮ್ಮದ್ ಬಿನ್ ತೊಗಲಖ
ನಿಗೆ ಸಂಬಂಧಪಟ್ಟ ಮತ್ತೊಂದು ವಿಷ
ಯವನ್ನು ಈಗತಾನೆ ಕಂಡುಹಿಡಿದಿದ್ದಾರೆ.
ಸುಲ್ತಾನನ ರಾಜ್ಯದಲ್ಲಿ ಒಂದು ಸಲ
ಹಠಾತ್ತಾಗಿ ಒಂದು ಕ್ಷಾಮವು ತಲೆ
ದೋರಿತು. ಅತಿವೃಷ್ಟಿ, ಅನಾವೃಷ್ಟಿ
ಗಳಾದವು. ಯಮುನೆಯಲ್ಲಿ ಪ್ರವಾಹ
ಗಳು ಬಂದು ಹಳ್ಳಿಹಳ್ಳಿಗಳೇ ಕೊಚ್ಚಿ
ಕೊಂಡು ಹೋದವು. ಲಕ್ಷಾಂತರ
ಪ್ರಜೆಗಳು ಹೊಟ್ಟೆಗಿಲ್ಲದೆ ಸಾಯಲಾ
ರಂಭಿಸಿದರು. ಅಸಂಖ್ಯಾತ ಪ್ರಾಣಿಗಳು
ನಷ್ಟವಾದವು. ಪ್ರಜೆಗಳಿಗೆ ಕೆಲವೆಡೆ
ಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ
ವಾಯಿತು. ಮತ್ತು ಕೆಲವೆಡೆಗಳಲ್ಲಿ
ನೀರು ಯಥೇಚ್ಛವಾಯಿತು—ನಿಲ್ಲುವು
ದಕ್ಕೆ ನೆರಳಿಲ್ಲದೇ ಹೋಯಿತು. ರೋಗ
ಗಳು ತಲೆಗೊಂಡು ಮಿಂಚಿನಂತೆ ಹರಡಿ
ದುವು. ಇದಕ್ಕೇನು ಮಾಡಬೇಕೆಂಬುದೇ
ಸುಲ್ತಾನನಿಗೆ ತೋರದೇ ಹೋಯಿತು.
ಅನೇಕರು ಅನೇಕ ವಿಧವಾಗಿ ಆಲೋ
ಚನೆಗಳನ್ನು ಹೇಳಿದರು. ರಾಜ್ಯಾಂಗದ
ಬಡ ನೌಕರರಿಗೂ, ದಿಕ್ಕಿಲ್ಲದ ಪ್ರಜೆಗ
ಳಿಗೂ ಉಚಿತವಾಗಿ ಹೆಚ್ಚು ಆಹಾರ
ಭತ್ಯಾದಿಗಳನ್ನು ಕೊಡಿಸಬೇಕೆಂದು ಕೆಲ
ವರಂದರು. ಬೊಕ್ಕಸದಿಂದ ದ್ರವ್ಯವನ್ನು
ಖರ್ಚುಮಾಡಿ ಬಡಬಗ್ಗರಿಗೆ ಮನೆಮಠ
ಗಳನ್ನು ಕಟ್ಟಿಸಿಕೊಡಬೇಕೆಂದು ಕೆಲವ
ರಂದರು. ದೇಶದ ವೈದ್ಯರನ್ನೆಲ್ಲಾ ಕರೆಸಿ
ಎಲ್ಲರನ್ನೂ ರೋಗೋಪದ್ರವ ನಿವಾರಣೆ
ಕೆಲಸಕ್ಕೆ ನೇಮಿಸಬೇಕೆಂದು ಮತ್ತೆ ಕೆಲ
ವರು ಹೇಳಿದರು. ಖಜಾನೆಯನ್ನು ಈ
ರೀತಿಯಾಗಿ ಬರಿದು ಮಾಡುವುದು
ಶ್ರೇಯಸ್ಕರವಲ್ಲವೆಂದು ಹಲವರು
ವಿರೋಧಿಸಿದರು. ದೇವತಾರಾಧನೆ,
ವ್ರತ ಮುಂತಾದುವನ್ನು ಮಾಡ
ಬೇಕೆಂದು ಕೆಲವರು ಬೋಧಿಸಿದರು.

*

ಅರಿಷ್ಟನಿವಾರಣೆಗಾಗಿ ಒಂದು ಶೈತಾ್ನ (ಪಿಶಾಚ) ಯಜ್ಞವನ್ನು ಮಾಡಿಸಬೇಕೆಂದು ಸುಪ್ರಸಿದ್ಧನಾದ ಒಬ್ಬ ಅರೇಬಿಯಾ ಮಂತ್ರವಾದಿಯು ಅಭಿಪ್ರಾಯಪಟ್ಟನು. ಸುಲ್ತಾನನಿಗಾದರೋ ಮನಸ್ಸಿನಲ್ಲಿ ತುಂಬಾ ವ್ಯಾಕುಲವುಂಟಾಯಿತು ಕಿಂಕರ್ತವ್ಯತಾಮೂಢನಾಗಿರುವಾಗ ಒಂದು ಆಲೋಚನೆ ಹೊಳೆಯಿತು. ಇರುವೆಗಳು ಈಸಂದರ್ಭದಲ್ಲಿ ಹೇಗೆ ವರ್ತಿಸುತ್ತಿದ್ದುವೆಂದು ನೋಡತೊಡಗಿದನು. ಆ ಕಾಲಕ್ಕೆ ಸರಿಯಾಗಿ ಇರುವೆಗಳಲ್ಲಿ ಒಂದು ಆಂದೋಲನವು ಕಂಡುಬಂದಿತು:

ದೆಹಲಿಯ ಇರುವೆಗಳಿಗೂ ಮಧುರೆಯ ಇರುವೆಗಳಿಗೂ ಮನಸ್ತಾಪವುಂಟಾಗಿ ಒಂದು ಯುದ್ಧವು ಪ್ರಾರಂಭವಾಗಿ ರಾಜಧಾನಿಯ ಇರುವೆಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳನೇಕ ಕಂಡುಬಂದವು. ರಾಜ್ಯದ ಭದ್ರತೆಗೇ ಲೋಪ ಬರುವಂತಿರುವಾಗ ಸೈನಿಕ ಇರುವೆಗಳ ಆವಶ್ಯಕತೆಗಳೇ ಅತ್ಯಂತ ಮುಖ್ಯವೆಂದೂ, ಇತರ ಇರುವೆಗಳು ಹೇಗೋ ಹಾಗೆ ಪ್ರಾಣ ಹಿಡಿದುಕೊಂಡಿರಬಹುದೆಂದೂ, ಉತ್ಕಟ ಸನ್ನಿವೇಶಗಳಲ್ಲಿ ದೇಶದ ನಾಯಕರೇ ಅತ್ಯಂತ ಪ್ರಾಮುಖ್ಯರೆಂದೂ, ಮಿಕ್ಕ ಇರುವೆಗಳೆಲ್ಲಾ ಇವರನ್ನು ಕಣ್ಣುಮುಚ್ಚಿಕೊಂಡು ಅನುಸರಿಸಬೇಕೆಂದೂ, ನಾಯಕರಿಗೆ ಬೇಕಾದ ಸಾಮಗ್ರಿ ಸೌಖ್ಯಗಳಿಗೆ ಯಾವದೊಂದೂ ಅಡಚಣೆಯೂ ಇರಕೂಡದೆಂದೂ ನಿರ್ಧರಿಸಲ್ಪಟ್ಟಿತ್ತೆಂದು ಸುಲ್ತಾನನಿಗೆ ಬೋಧೆಯಾಯಿತು.

ಇರುವೆಗಳ ನಾಯಕರಲ್ಲಿಯೂ, ಮುಂದಾಳುಗಳಲ್ಲಿಯೂ ಒಂದು ವಿಶೇಷವಿತ್ತು. ಅವು ಯಾವಾಗಲಾದರೂ ಒಮ್ಮೊಮ್ಮೆ ಮಿಕ್ಕ ಇರುವೆಗಳಂತೆ ಸಾಮಾನ್ಯಾಹಾರವನ್ನು ಸ್ವೀಕರಿಸಿದರೂ ಜವಾಬ್ದಾರಿಯುತ ಸ್ಥಾನಗಳಲ್ಲಿರುವುದರಿಂದ ಒಂದು ನಮೂನೆಯಾದ ಆಹಾರದ ಮೇಲೆಯೇ ಹೆಚ್ಚು ಜೀವಿಸುತ್ತಿದ್ದವು. ಇದಾದರೋ, "ಜೋನಿ"ಯೆಂಬ ಬೆಲ್ಲದ ವಿಶೇಷದಿಂದ ತಯಾರಿಸಲ್ಪಟ್ಟ ಮಿದುಳಿಗೆ ಬಲಕೊಡುವ ಒಂದು ವಸ್ತುವಾಗಿತ್ತು. ಹಿಂದೂ ಶಾಸ್ತ್ರಗಳಲ್ಲುಕ್ತವಾಗಿದ್ದ "ಸೋಮ"ವೂ "ಅಮೃತ"ವೂ ಯಾವ ಶಕ್ತಿಯನ್ನು ನೀಡುವುವೆಂದು ಪ್ರಸಿದ್ಧಿಯಿದ್ದಿತೋ, ಈ "ಜೋನಿ"ಯೂ ಅದೇ ರೀತಿಯ ಶಕ್ತಿ ದಾರ್ಢ್ಯಗಳನ್ನು ಇರುವೆಗಳಲ್ಲಿ ಉಂಟುಮಾಡುವುದಾಗಿತ್ತು. ಆದುದರಿಂದಲೇ ಈ ಕಠಿಣ ಪರಿಸ್ಥಿತಿಯಲ್ಲಿ ನಾಯಕ ಇರುವೆಗಳಿಗೆ ಈ 'ಜೋನಿ'ಯನ್ನು ಒಂದಕ್ಕೆರಡರಷ್ಟು ಒದಗಿಸಬೇಕೆಂದು ಏರ್ಪಾಡಾಗಿದ್ದಿತು.

ಸುಲ್ತಾನನು ಇದನ್ನು ನೋಡಿ ಆಶ್ಚರ್ಯದಿಂದ ತಲೆದೂಗಿದನು. ಎಂತಹ ಸಾಧುವಾದ ಏರ್ಪಾಟು! ಇರುವೆಗಳಲ್ಲಿದ್ದ ಹಾಗೆಯೇ ಮಾನವರಲ್ಲಿಯೂ ನಾಯಕರೇ ಪ್ರಧಾನರೆಂದೂ, ಮಿಕ್ಕ ಪ್ರಜೆಗಳು ಎಷ್ಟಾದರೂ ಪಶುಸಮಾನರೆಂದೂ ತತ್ವಜ್ಞನಾದ ಅವನು ಮೊದಲೇ ಅರಿತಿದ್ದನು. ಸಮಸ್ತ ಜವಾಬ್ದಾರಿಯನ್ನೂ ಹೊತ್ತ ನಾಯಕರನ್ನು ರಕ್ಷಿಸಿದರೆ, ಸಾಮಾನ್ಯ ಪ್ರಜೆಗಳು ತಮ್ಮನ್ನು ತಾವೇ ರಕ್ಷಿಸಿಕೊಳ್ಳುವರು! ಗೊದ್ದಗಳು ರಕ್ಷಿತವಾದರೆ, ಕಟ್ಟಿರುವೆಗಳು ರಕ್ಷಿತವಾದಂತೆಯೇ! ಮೊಹರು ದೀನಾರಗಳನ್ನು ಭದ್ರಪಡಿಸಿದ ಮೇಲೆ ಕಾಸು ಕೊಸರುಗಳನ್ನೇನು ಕೇಳುವುದು? ಇಷ್ಟು ತರ್ಕಿಸಿ ಮನಗೊಳ್ಳುವುದಕ್ಕೆ ಸುಲ್ತಾನ

ನಿಗೆ ಅರ್ಥಶಾಸ್ತ್ರಜ್ಞರ ಸಹಾಯವೇನೂ ಬೇಕಿರಲಿಲ್ಲ. ಇರುವೆಗಳ ಅನುಭವವೇ ಸಾಕಾಗಿತ್ತು! ಅಲ್ಲದೆ, ಇರುವೆಗಳಲ್ಲಿ ದ್ದಂತೆಯೇ ತನ್ನ ರಾಜ್ಯಾಂಗದಲ್ಲಿಯೂ ನಾಯಕರು ಮೇಧಾಶಕ್ತಿವಿವೃದ್ಧಕವಾದ ಕೆಲವು ವಿಶೇಷಾಹಾರ ಪಾನೀಯಗಳನ್ನು ಪಯೋಗಿಸುತ್ತಿದ್ದುದು ಸುಲ್ತಾನನಿಗೆ ತಿಳಿದಿದ್ದಿತು. ಒದಗಿದ್ದ ದುರಂತ ಪರಿಸ್ಥಿತಿಯನ್ನು ಎದುರಿಸಬೇಕಾದರೆ, ದೇಶದ ನಾಯಕರನ್ನು ಹುರಿದುಂಬಿಸುವುದೇ ಶ್ರೇಷ್ಠವಾದ ಮಾರ್ಗವೆಂದು ನಿಶ್ಚೈಸಿದನು. ಒಡನೆಯೇ ಈ ರೀತಿ ಅಪ್ಪಣೆ ಹೊರಡಿಸಿದನು:

೧. ರಾಜಧಾನಿಗೆ ಬಂದು ಮೊರೆಯಿಡುವ ಪ್ರಜೆಗಳನ್ನೆಲ್ಲಾ ಒಡನೆಯೇ ಅವರವರ ಹಳ್ಳಿಗಳಿಗೆ ಅಟ್ಟಬೇಕು. (ಮಿತ ಬಲಪ್ರಯೋಗವನ್ನು ಮಾಡಬಹುದು —ಪ್ರಜೆಗಳ ಹಿತದ ದೃಷ್ಟಿಯಲ್ಲಿಯೇ).

೨. ಕ್ಷಾಮದ ದೆಸೆಯಿಂದ ಆಹಾರ ಪದಾರ್ಥಗಳು ಸಿಕ್ಕುವುದು ಕಷ್ಟವಾದುದರಿಂದ ಸಾಮಾನ್ಯ ಪ್ರಜೆಗಳು ಮೊದಲು ಸೇವಿಸುತ್ತಿದ್ದ ಆಹಾರದಲ್ಲಿ ಅರ್ಧ ಭಾಗ ಮಾತ್ರ ತಿನ್ನತಕ್ಕದ್ದು. ದೇಶದ ಹಿತದಲ್ಲಿ ಕೆಲವರು ಉಪವಾಸದಿಂದ ಪ್ರಾಣತ್ಯಾಗ ಮಾಡಿದರೆ, ಅದೇನೂ ದೋಷವಲ್ಲ—ಶ್ರೇಯಸ್ಕರವೇ. ಸೋಮಾರಿಗಳಾದ ಸಾಧು, ಫಕೀರ್ ಮತ್ತು ಭಿಕ್ಷುಕರು ಆರ್ಥಿಕ ದೃಷ್ಟಿಯಿಂದ ಸಮಾಜಕ್ಕೆ ಒಂದು ಹೊರೆಯಷ್ಟೆ; ಈ ಹೊರೆ ಕಡಿಮೆಯಾದಷ್ಟೂ ಒಳ್ಳೆಯದು.

೩. ರಾಜ್ಯಾಂಗದ ಉನ್ನತ ನಾಯಕರಾದ ನಮ್ಮ ವಜೀರ್, ಉಮ್ರಾ ಮತ್ತು ಸರದಾರರಿಗೆ ಅವರ ಕಷ್ಟತರ ಕಾರ್ಯಗಳನ್ನು ನೆರವೇರಿಸುವ ಸಲುವಾಗಿ ಅವರ ವರ ಮೇಧಾಶಕ್ತಿ ಬೆಳವಣಿಗೆಗೆಬೇಕಾದ ಆಹಾರ ಪಾನೀಯಗಳನ್ನು ದ್ವಿಗುಣವಾಗಿ ಸರಬರಾಜು ಮಾಡತಕ್ಕದ್ದು.

೪. ಮತ್ತು, ಹೆಚ್ಚು ಬೇಕಾದಲ್ಲಿ ಅವರು ಕೊಳ್ಳುವುದಕ್ಕನುಕೂಲವಾಗುವಂತೆ ಅವರ ಭತ್ಯ, ಮಾನ್ಯಗಳನ್ನು ಶೇಕಡಾ ೨೦ರಷ್ಟು ಹೆಚ್ಚಿಸಿದ್ದೇವೆಂದು ಹೇಳಲು ನಾವು ಸಂತೋಷಿಸುತ್ತೇವೆ.

೫. ಸಾಮಾನ್ಯ ಪ್ರಜೆಗಳು ತಮ್ಮ ಕಷ್ಟ ತಾಪತ್ರಯಗಳ ಬಗ್ಗೆ ಈ ಮೇಲ್ಕಂಡ ನಾಯಕರಾರನ್ನೂ ತೊಂದರೆ ಪಡಿಸಬಾರದು. ದರಿದ್ರ ಪೀಡಿತರಾದ ಪ್ರಜೆಗಳ ಗೋಳು ಎಂದು ತಪ್ಪಿದ್ದು? ಅದು ತಮ್ಮ "ಕಿಸ್ಮತ್" ಎಂದರಿತು, ಮಿಮಳಿನಿಂದಲೇ ಕೆಲಸಮಾಡುವ ನಮ್ಮ ಉನ್ನತ ನಾಯಕರಿಗೆ ಈಗ ದೇಶದಲ್ಲೊದಗಿರುವ ಕ್ಷಾಮ ಮತ್ತು ರೋಗ ಸಮಸ್ಯೆಯನ್ನು ಭೇದಿಸಲು ತಲ್ಲೀನವಾದ ಐಕ್ಯಾಗ್ರತೆಯಿಂದಿರಲು ಸಂಪೂರ್ಣ ಅವಕಾಶ ಕೊಡಬೇಕು.

೬. ಈ ನಮ್ಮ "ಫರಮಾನ್" ಗಳೆಲ್ಲವೂ ಪವಿತ್ರವಾದ ಈ ರಂಜಾನ್ ಹಬ್ಬದ ದಿನದಿಂದಲೇ ಜಾರಿಗೆ ಬರತಕ್ಕದ್ದು. ಜೈ ತೊಗಲಖ್!

ಈ ರೀತಿಯಾಗಿ ಪರಮ ಬುದ್ಧಿಶಾಲಿಯಾದ ಸುಲ್ತಾನನು ಇರುವೆಗಳಿಂದ ಕಲಿತ ಉಪಾಯಗಳಿಂದ ದೇಶದ ಕಠಿಣ ಸಮಸ್ಯೆಗಳನ್ನು ಎದುರಿಸಿ ಯಶಸ್ವಿಯಾದನೆಂದು ಯಮುನಾ ನದಿಯಲ್ಲಿ ಹೊಸದಾಗಿ ದೊರಕಿರುವ ಕೆಲವು ಶಾಸನ ಶಿಲೆಗಳಿಂದಲೂ, "ನಿಜಾಮುದ್ದೀನ್" ಎಂಬ ಹಳ್ಳಿಯಲ್ಲಿ ದೊರೆತಿರುವ ಕೆಲವು ಓಲೆಗರಿಗಳಿಂದಲೂ ವ್ಯಕ್ತಪಟ್ಟಿವೆ ಎಂದು ಹೇಳಲಾಗಿದೆ. —ಬೀರಣ್ಣ.

ಕೇರಾಫ್ ಪ್ಲಾಟ್‌ಫಾರಂ

ರಂಗಣ್ಣನ ಪ್ರೋಗ್ರಾಮು; ಭಾನುವಾರ ಮಲ್ಲೇಶ್ವರ, ಸೋಮವಾರ ಗಾಂಧೀ ನಗರ, ಮಂಗಳವಾರ ವಿಶ್ವೇಶ್ವರಪುರ, ಬುಧವಾರ ಬಸವನಗುಡಿ, ಗುರುವಾರ ಚಾಮರಾಜಪೇಟೆ, ಶುಕ್ರವಾರ ಸಿಟಿ, ಶನಿವಾರ ಕಂಟೋನ್ಮೆಂಟು, ಹುಡುಕಿ ನೋಡಿ ಬಿಡುವುದು. ಯಾವುದೂ ಹೋಟಲಿನಲ್ಲಿ ಊಟ, ರೂಮು ಕಡೆಗೆ ಸಿಕ್ಕದೇ ಹೋದರೆ, ಮಾರನೇ ದಿನ ಏರ್‌ಕ್ರಾಫ್ಟಿನ ಕೆಲಸಕ್ಕೆ ರಾಜೀನಾಮೆ ಕೊಟ್ಟು ತೆಪ್ಪಗೆ ಹಳ್ಳಿಗೆ ವಾಪಸು ಹೋಗಿಬಿಡುವುದು, ಅಂತ. ಹಾಗೂ ಹೀಗೂ ಇಲ್ಲಿಯವರೆಗೆ ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಮು, ಛತ್ರಗಳ ಜಗುಲಿ, ಸಾರ್ವಜನಿಕ ಭವನಗಳ ಪೋರ್ಟಿಕೋ ಇವುಗಳನ್ನೇ ರೂಮು ಅಂದುಕೊಂಡು ಕಾಲ ಕಳೆದಿದ್ದಾಯಿತು. ಇನ್ನು ಮುಂದೆ ಹೋಟಲಿನಲ್ಲಿ ರೂಮಿಲ್ಲದೆ ಸಾಧ್ಯವಿಲ್ಲವೆನಿಸಿತು. ಹೋಟಲಿನಲ್ಲಿ ವಾಸವಾದರೆ ಊಟವಾದರೂ ಸಿಕ್ಕೀತು. ಇಷ್ಟು ದಿನ ರಂಗಣ್ಣನಿಗೆ ಗುಂಡಪ್ಪನ ಹೋಟಲ ದೋಸೆಗಳೇ ಊಟವಾಗಿತ್ತು. ಅದಕ್ಕೇ ಅವನು ಈ ರೀತಿ ಪ್ರೋಗ್ರಾಂ ತಯಾರಿಸಿ ಒಂದು ವಾರ ಬೆಂಗಳೂರಿನ ಎಲ್ಲಾ ಬೀದಿಗಳನ್ನೂ ತಲಾಯಿಸಿ ವಿಚಾರಿಸಿದ. ಎಲ್ಲಾ ಹೋಟಲಿನ ರೂಮುಗಳಲ್ಲೂ ಯಾರಾದರೂ ಏರ್‌ಕ್ರಾಫ್ಟಿನವರು ಇದ್ದೇ ಇರುತ್ತಿದ್ದರು.

ಜೇಬಿನಲ್ಲಿ ಎಷ್ಟು ರೂಪಾಯಿಗಳಿದ್ದರೇನು? ಯಾವ ಹೋಟಲಿನಲ್ಲೂ ಖಾಯಂ ಬಾಡಿಗೆದಾರನಾದ ಹೊರತು ಊಟವಿಲ್ಲ. ರೇಷನ್ ಕಾಲವಲ್ಲವೇ!

ಇನ್ನೊಂದು ಸೋಮವಾರ ಪ್ರೋಗ್ರಾಮನ್ನನುಸರಿಸಿ ಬಂದೇಬಂತು. ಬೇಜಾರಿನಿಂದ ರಂಗಣ್ಣ ಬೇಸತ್ತು, ರಾತ್ರಿಯ ದೋಸೆ ಮುಗಿಸಿಕೊಂಡು, ಮಲ್ಲೇಶ್ವರದ ಕೆರೆಯ ಕಡೆ ವಾಕಿಂಗ್ ಹೊರಟ. ಕೆರೆಯ ಏರಿಯ ಮೇಲೆ ನಿಂತು, ಒಂದು ಸಿಗರೇಟು ಹೊತ್ತಿಸಿ ಸುತ್ತಲೂ ನೋಡಿದ. ಅವನ ಕಿವಿಗೆ ಆಗ ಯಾವನದೋ ಆರ್ತಧ್ವನಿ ಕೇಳಿಬಂತು. ಕೆರೆಯ ನಡುವೆ ಒಬ್ಬಾತನ ತಲೆ ಎರಡು ಮೂರು ಸಲ ಮೇಲಕ್ಕೆ ಬಂದು ಒಳಕ್ಕೆ ಹೋಯಿತು.

ರಂಗಣ್ಣ "ಯಾರದು!" ಅಂದ.

ಉತ್ತರ "ಅಯ್ಯಯ್ಯೋ!"

ರಂಗಣ್ಣ "ನೀವು ಏರ್‌ಕ್ರಾಫ್ಟಿನಲ್ಲಿದ್ದೀರಾ?" ಅಂದ.

"ಹೌದ್ರೀ, ಬದುಕಿಸಿ, ಅಯ್ಯೋ!"

"ನಿಮ್ಮ ಅಡ್ರೆಸ್ಸು ಕೊಡ್ರೀ........"

"ಅಯ್ಯೋ, ಮೊದಲು ನನ್ನ ಉಳಿಸಿ, ಸತ್ತೆ!"

"ಮೊದಲು ನಿಮ್ಮ ಅಡ್ರಸ್ಸು ಹೇಳಿ!"

"ದಮ್ಮಯ್ಯಾ ಕಾಪಾಡಿ, ಕುಯ್ಯೋ, ಮರ್‍ರೋ!"

"ನೀವು ಯಾವ ಹೋಟಲಿನಲ್ರೀ ಇರೋದು?"

"ಕರಾಡೀ ಆನಂದ ಭವನ........ಬೇಗ........"

"ಸಧ್ಯ!" ಅಂದದ್ದೇ ರಂಗಣ್ಣ,

"ನಿಮ್ಮ ಹೆಸರೇನು?" ಅಂದು ಕೂಗಿದ.

ನೀರಿನೊಳಗಿದ್ದ ಪ್ರಾಣಿ ಮುಳುಗುತ್ತ,

"ಶ್ರೀನಿವಾಸಯ್ಯ ಅಂತ! ತಮಾಷೆ ಇರಲಿ, ಬೇಗ ಬಂದು ಉಳಿಸಿ ನನ್ನನ್ನು ....ಹೋದೆ........ಹೋ ೯ ೯ ದೆ!" ಅನ್ನುತ್ತಿದ್ದಾಗಲೇ, ರಂಗಣ್ಣ ಅವನನ್ನ ಹಾಗೇ ಬಿಟ್ಟು ಒಂದೇ ಉಸಿರಿಗೆ ಓಡಿ ಸಿಟಿ ಬಸ್ಸು ಹಿಡಿದು ಕರಾಡೀ ಆನಂದ ಭವನಕ್ಕೆ ಹೋದ. ಅಲ್ಲಿ ಮಾಲೀಕನನ್ನ ವಿಚಾರಿಸಿದ:

"ಏರ್‌ಕ್ರಾಫ್ಟಿನ ಶ್ರೀನಿವಾಸಯ್ಯನ ರೂಮು ಖಾಲಿ ಆಯಿತು, ಅದನ್ನ ನನಗೆ ಕೊಡಿ. ಬಾಡಿಗೆ ಎಷ್ಟಾದರೂ ಆಗಲಿ" ಅಂದ.

"ಖಾಲಿ ಇಲ್ಲ ಆ ರೂಮು ಈಗ!"

"ಇದೇರೀ, ನನಗ್ಗೊತ್ತು. ಆತ ಈಗತಾನೇ ಮಲ್ಲೇಶ್ವರದ ಕೆರೇಲಿ ಮುಳುಗಿ ಸತ್ತ."

"ಹೌದ್ರೀ, ಅದು ನನಗೂ ಗೊತ್ತು. ಆದರೆ ಆತನ್ನ ಕೆರೇಲಿ ತಳ್ಳಿದ ಬ್ರಾಹ್ಮಣ ಆಗಲೇ ರೂಮನ್ನ ಆಕ್ರಮಿಸಿಕೊಂಡಾಯಿತು?" ಅಂದು, ಸೇಟು ರೂಪಾಯಿಗಳನ್ನ ಎಣಿಸಲು ಶುರು ಮಾಡಿದ.

—ಎಸ್. ಎನ್. ಶಿ.

—o—

ಉಪಚಾರ

(ಒಂದು ದೃಶ್ಯ)

ಸೀತಮ್ಮ—ಬನ್ನಿ ಲಕ್ಷ್ಮಮ್ಮನವರೇ! ಕೂತುಕೊಳ್ಳಿ! ತುಂಬಾ ಅಪರೂಪವಾಗಿದೀರಲ್ಲಾ!

ಲಕ್ಷ್ಮಮ್ಮ—ಯಾಕೆ? ನವರಾತ್ರೀಲಿ ಒಂದು ದಿನ ಕೂಡ ಮನೆ ಕಡೆ ಬರಲೇ ಇಲ್ಲವಲ್ಲಾ ನೀವು, ಸೀತಮ್ಮನವರೇ!

ಸೀ—ಅಯ್ಯೋ, ಪ್ರಾಣ ಹೋಗ್ತಾ ಇರುವಾಗ ವೀಣೆ ಬಾರಿಸಿದರು ಅಂದ ಹಾಗೆ! ಗೊಂಬೆಗಿಂಬೆ ಯಾರಿಗೆ ಬೇಕಾಗಿದೆ? ನಮ್ಮನೇಲಿ ವಿಪರೀತ ಗಲಾಟೆ, ಲಕ್ಷ್ಮಮ್ಮನವರೇ, ಹತ್ತು ಹದಿನೈದು ದಿನದಿಂದ...... .

ಲ—ನಂಟರು ಬಂದಿದ್ದಾರೆಯೇ?

ಸೀ—ನೋಡಿ ಲಕ್ಷ್ಮಮ್ಮನವರೇ, ಈ ಹಾಳು ನವರಾತ್ರಿ ಬಂತು ಅಂದರೆ, ಮೈಸೂರಿನವರೆಲ್ಲಾ ದೇಶಾಂತರ ಹೊರಟುಬಿಡೋವೇ ವಾಸಿ. ಕಂಡವರಿಗೆಲ್ಲಾ ಚೊಕ್ಕ ಭೋಜನ ಹಾಕಿ, ನಾವಿಲ್ಲಿ ನಿಸ್ಪ್ರಾಣರಾಗಿ ಬಿದ್ದಿರೋದೇ ಆಗಿದೆ........

ಲ—ಯಾರವರು? ಎಲ್ಲಿಂದ ಬಂದರು!

ಸೀ—ನಂಟರು ಅಂದರೆ, ಯಾವುದೋ ಬಾದರಾಯಣ. ಅವರ ಜೊತೆಗೆ ಓದಿದ್ದರಂತೆ; ಸಾವಿರಾರು ಜನ ಓದೋದಿಲ್ಲವೆ, ಒಂದು ಸ್ಕೂಲು ಒಂದು ಕಾಲೇಜು ಅಂದರೆ ..... ಹಾಗೇನೇ. ಆದರೂ ಇದೆಯಲ್ಲಾ, ಮಾನ, ಮರ್ಯಾದೆ ನಮಗೆ! ಅವರಿಗಿಲ್ಲದೆ ಇದ್ರೂನೂ! ಈ ಊರಲ್ಲೇ ಹಾಳು ಅದು ಇದು ಅಂತ ನೂರೆಂಟು ಇಟ್ಟುಬಿಡುತ್ತಾರೆ, ನವರಾತ್ರೀಗೆ, ಕೆಲಸ ಇಲ್ದೇ ಇರೋರನ್ನೆಲ್ಲ ಇಲ್ಲಿಗೆ ಎಳೆಯೋಕೆ; ಸರಿ, ಕಾಗದ ಬರೆದರು. ಊರಲ್ಲಿದುವುದು ಅನುಮಾನ ಅಂತ ಬರೆಯಿರಿ ಅಂದೆ, ನಮ್ಮ ಮಾತು ಕೇಳುತ್ತಾರೆಯೇ! ಈಗ ಅವರಿಗೂ ಅನುಭವಕ್ಕೆ ಬಂತು ಅನ್ನಿ! ಜಂಬೂಸವಾರಿ ಆದ ಮರುದಿನವೇ ಹೊರಡಬೇಡವೇ, ಮಾನವಾಗಿ?........

ಲ—ಹೊರಡತಿಲ್ಲವೆ ಅವರು? ಊರೂರೇ ಖಾಲಿಯಾಗಿದೆಯಲ್ಲಾ ಆಗಲೇ.

ಸೀ—ಯಾಕೆ ಹೊರಡುತ್ತಾರೆ ಇವರು? ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ಸುಖವಾಗಿ ನಾನು ಮಾಡಿ ಹಾಕೋವಾಗ? ಗಂಧದೆಣ್ಣೆ ಕಾರ್ಖಾನೆಯಂತೆ, ರೇಷ್ಮೆ ಕಾರ್ಖಾನೆಯಂತೆ, ಇದೆಯಲ್ಲಾ ಈ ಊರಲ್ಲಿ, ನಿಧಾನವಾಗಿ ಒಂದೊಂದಾಗಿ

ನೋಡೋಹಕ್ಕೆ ಪ್ರಾರಂಭ! ಗಂಧಾನ ಗಾಣದಲ್ಲಿ ಹಾಕಿ ಎಣ್ಣೆ ತೆಗೆಯೋದನ್ನ ನೋಡೋದೇನು ಬಂತು ಮಹಾ! ಹೋಗಿವೆ, ಎಲ್ಲಾ ಕಾರಲ್ಲಿ, ಕಂಠಪೂರ್ತಿ ಕವಳ ಹೊಡೆದುಬಿಟ್ಟು........

ಲ—ಕಾರಲ್ಲಿ ಬಂದಿದಾರೋ?

ಸೀ—ಹೂಂ! ಕಾರು ಬೇರೆ, ಕಂಡವರ ಮನೆ ಅನ್ನ ತಿನ್ನೋ ಯೋಗ್ಯತೆಗೆ! ಇವರ ಕಾರು, ಇವರ ಕೀರು, ಇವರ ಆಳು ಕಾಳು, ಇವರ ಡ್ರೈವರು, ಗೀವರು— ಇವಕ್ಕೆಲ್ಲಾ ಇಲ್ಲಿ ಶುಶ್ರೂಷೆ ಆಗ್ತಾಯಿದೆ. ಹುಡುಗರೋ, ಒಂದು ಪಟಾಲವೇ ಇದೆ........ಅಯ್ಯೋ ಲಕ್ಷ್ಮಮ್ಮನವರೇ! ಅವಕ್ಕೂ ನಮ್ಮ ಲಲಿತೆಗೂ ಮೂರ್ಹೊತ್ತೂ ಜಗಳ. ಬೆಳಗಾದರೆ ಮಾರಾಮಾರಿ!........ಅಂಗಳದಲ್ಲಿ ಒಂದು ಹೂವು, ಒಂದು ಗಿಡ ಉಳಿಸಿಲ್ಲ. ಕಪಿಗಳು ಅಂದರೆ, ಒಂದಕ್ಕಿಂತ ಒಂದು........ಬಾಲ ಒಂದು ಜಾಕಿ! ಅದನ್ನ ಸಿಕ್ಕುವುದರೊಳಗೇ ಧುಮುಕಿಬಿಟ್ಟಿವೆ, ಬ್ರಂಹ್ಮ ಲೋಕದಿಂದ!......

ಲ—ಅಯ್ಯೋ, ಅಯ್ಯೋ! ಹೀಗಾಗಿದೆಯೋ ನಿಮ್ಮ ಪಾಡು? ನನಗೆ ಗೊತ್ತೇ ಇಲ್ಲ ಸೀತಮ್ಮ! ಮನೆಗೆ ನೀವು ಬರದೇ ಇದ್ದದ್ದು ನೋಡಿ, ಎಲ್ಲೋ ನೀವು ದಿನವೂ ಅರಮನೆಗೋ, ಎಗ್ಸಿಬಿಷನ್ನಿಗೋ ಹೋಗ್ತಿದೀರಿ ಅಂತಿದ್ದೆ........

ಸೀ—ಬಿಡಿ ಅಂದರೆ........ಆ ಪುಣ್ಯ ನನಗೆಲ್ಲಿಂದ ಬರಬೇಕು! ಅದನ್ನೆಲ್ಲಾ ಹಾಳಾದವರು ಅವರೇ ಪಡೆದುಬಂದಿದಾರೆ..........ಏಲಕ್ಕಿಪ್ಪಾಚಾರಿ ಛತ್ರ ಇದ್ದ ಹಾಗಾಗಿದೆ ಮನೆ; ಬೆಳಗಾದರೆ ಕಾಫಿ ಕೊಡು, ಕನ್ನಂಬಾಡೀಗೆ ಹೋಗಬೇಕು; ಸಾಯಂಕಾಲ ಸಜ್ಜಿಗೆ ಮಾಡು, ಶ್ರೀರಂಗಪಟ್ಟಣಕ್ಕೆ ಹೋಗಬೇಕು!........ಅವಸರ ....ಗಲಾಟೆ, ಅವಾಂತರ. ಅವರಿಗೇನು? ಅಡಿಗೆ ಮನೆ ಬಾಗಿಲ ಹತ್ತಿರ ಬಂದು ಗುಟುರು ಹಾಕುತ್ತಾರೆ........ರೇಗಿ ರೇಗಿ ಬೀಳುತ್ತಾರೆ.........ಗಂಡು ಗಂಡಸರು ಸ್ನೇಹವಾದರೆ ನಮಗೆ ಯಾಕೆ ಈ ಗೋಳು ಅಂತೀನಿ!

ಲ—ಆಗೋ, ಬಂದರೂಂತ ಕಾಣುತ್ತೆ........ಯಾವುದೋ ಕಾರು ಬಂತು....

ಸೀ—ಬರಲಿ ಬರಲಿ! ಇವತ್ತೇನೋ ಅವರೂರಿಂದ ಒಂದು ಕಾಗದ ಬಂದಿದೆ, ಅವರ ಮಗಳಿಂದ ಅಂತ ಕಾಣುತ್ತೆ ಅಂದರು........ಮೊಮ್ಮಗುವಿಗೆ ಹುಷಾರಿಲ್ಲ ಅಂತ ಅಕೇನೂ ಹೇಳುತ್ತಿದ್ದರು........ಸದ್ಯಃ ಅದಕ್ಕೇನಾದರೂ ಹೆಚ್ಚುಗಿಚ್ಚಾಗಿದ್ದರೆ, ಕಾಗದ ನೋಡುತ್ತಲೂ ಹೊರಡುತ್ತಾರೆ........

ಲ—ಇದೇನ್ರಿ ಅನ್ಯಾಯ! ಚೆನ್ನಾಗಿದೆ, ಹೀಗೆ ಒಬ್ಬರ ಮನೆಗೆ ಬಂದು, ಮೆಲ್ಲಗೆ ಬೇರು ಬಿಟ್ಟುಬಿಡೋದೇ? ಕಷ್ಟ ನಿಷ್ಟುರ ನೋಡಬೇಡವೇ?

ಸೀ—ಸುಮ್ಮನಿರಿ, ಆ ಮೇಲೆ ಮಾತಾಡೋಣ............ನೀವಿಲ್ಲೇ ಇರಿ ಲಕ್ಷ್ಮಮ್ಮನವರೇ, ಆ ಮೇಲೆ ಹೋಗಬಹುದು.

ಲ—ಲಲಿತು ಎಲ್ಲಿ? ಪಾಪ ಅದಕ್ಕೆಷ್ಟು ಬೇಜಾರಾಗಿದೆಯೋ ಏನೋ!

ಸೀ— ಸ್ಕೂಲಿಗೆ ಹೋಗಿದೆ. ಅದಂತೂ ಈಗ ಮನೇಗೆ ಬರೋದು ಊಟ, ಸ್ನಾನ, ಇಷ್ಟಕ್ಕೇನೆ. ಮಿಕ್ಕ ವೇಳೆಯೆಲ್ಲಾ ಯಾರು ಯಾರ ಮನೆಯಲ್ಲೋ ....(ಆಕೆ ಬರುವಳು). ಏನು? ನೋಡಿದಿರಾ, ಗಂಧದೆಣ್ಣೆ ಕಾರ್ಖಾನೇನ?

ಆಕೆ—ಅಯ್ಯೋ, ಬಿಡಿ ಅಂದ್ರೆ! ಗಂಧದೆಣ್ಣೆ ಹಾಳಾಯಿತು! ನನಗೆ ಏನೂ ಬೇಡ ಈಗ........ಸರಸು ಗಂಡ ಬೆಳಿಗ್ಗೆ ಹೈದರಾಬಾದಿಂದ ಬೆಂಗಳೂರಿಗೆ ಬಂದ ನಂತೆ......ಅವನಿಗೇನೋ ಕಣ್ಣಿನಲ್ಲಿ ತುಂಬಾ ಖಾಯಿಲೆಯಂತೆ........ಆಪ್ರೇಷನ್ ಆಗಬೇಕಂತೆ........ಈಗಲೇ ನಾವು ಹೊರಟುಬಿಡಬೇಕಮ್ಮ........ನಮಗೆ ಇಲ್ಲಿ ನಿಲ್ಲುವುದಕ್ಕೆ ನೆಮ್ಮದಿಯೇ ಇಲ್ಲ........

ಸೀ—ಛೆ! ಛೆ! ಇನ್ನೂ ನಾಲ್ಕುದಿವಸ ಇದ್ದು ಹೋಗಬೇಕು ನೀವು. ನೋಡಿ, ಲಕ್ಷ್ಮಮ್ಮನವರೇ, ಇದುವರೆಗೂ ನಾವೆಲ್ಲಾ ಒಂದು ದಿವಸವಾದರೂ ಹಾಯಾಗಿ ಕೂತು ಹರಟೆ ಹೊಡೆದಿಲ್ಲ. ಇವರನ್ನ, ನಿಮ್ಮ ಮನೆಗೆ, ನನ್ನ ತಮ್ಮನ ಮನೇಗೆ ಕರೆದುಕೊಂಡು ಹೋಗಲೇ ಇಲ್ಲ........ಇವರ ಮಕ್ಕಳು ಎಷ್ಟು ಲಕ್ಷಣ ವಾಗಿವೆ ಅಂತ! ನಂದಗೋಕುಲದ ಹಾಗಿದೆ, ನಮ್ಮ ಮನೆ, ಹದಿನೈದು ದಿನದಿಂದ!

ಆಕೆ—ಹರಟೆಗಿರಟೇಗೆ ಈಗ ಮನಸ್ಸು ಸ್ತಿಮಿತದಲ್ಲೇ ಇಲ್ಲ, ಸೀತಮ್ಮನವರೆ! ನಾವು ಹೊರಟುಬಿಡುತ್ತೇವೆ,........ತಕ್ಷಣ........

ಸೀ—ಒಂದು ಕೆಲಸಮಾಡಿ! ನಿಮ್ಮ ಯಜಮಾನರು ಹೋಗಿ, ಎಲ್ಲಾ ವಿಷ ಯಾನೂ ತಿಳಿದುಕೊಂಡು, ನಿಮ್ಮ ಅಳಿಯನ ಸಮಾಚಾರಕ್ಕೆ ಕಾಗದ ಬರೆಯಲಿ ....ಆ ಮೇಲೆ ನೀವು ಹೋಗಬಹುದು........ಅಂಥ ಅಗತ್ಯವಿದ್ದರೆ........

ಆಕೆ—ಅಯ್ಯೋ, ಅಯ್ಯೋ! ಆದಾಗೋಲ್ಲ, ಸೀತಮ್ಮನವರೇ, ಸರಸುಗೆ ಪಾಪ, ಏನೂ ತಿಳೀದು! ಅವಳಿಗೆ ಆಸ್ಪತ್ರೆ ಅಂದರೆ ಪ್ರಾಣವೇ ಹಾರಿಹೋಗುತ್ತೆ.

ಸೀ—ಹಾಗಾದರೆ, ಇನ್ನೊಂದು ಕೆಲಸಮಾಡಿ............ನಿಮ್ಮ ಅಳಿಯನ್ನ ಇಲ್ಲಿಗೇ ಕರೆದುಕೊಂಡು ಬನ್ನಿ! ಇಲ್ಲಿ ನಮ್ಮವರಿಗೆ ಒಬ್ಬರು ಗೊತ್ತು........ಆಪ್ರೇಷನ್ ಇಲ್ಲದೇನೇ ಕಣ್ಣಿನ ಖಾಯಿಲೆ ಎಲ್ಲಾನೂ ವಾಸಿ ಮಾಡುತ್ತಾರಂತೆ........ಇಲ್ಲಿಗೇ ಬರಲಿ! ಕಾಗದ ಹಾಕಿ ...... ತಂತಿ ಕೊಡಿ........ನಮ್ಮ ಮನೆ ಏನು, ನಿಮ್ಮ ಮನೆ ಏನು? ನೀವೆಲ್ಲ ಇಲ್ಲೇ ಇರಿ, ಆತನಿಗೆ ವಾಸಿಯಾಗುವ ತನಕ........ಏನು ಕೊಳ್ಳೇ ಹೋಗೋದು? ಇಲ್ಲೇ ಇದ್ದು, ನಾಲ್ಕು ದಿವಸ ಸುಧಾರಿಸಿಕೊಂಡೇ ಹೋಗಲಿ...... ನಾನೂ ನಿಮ್ಮ ಸರಸೂನ, ನಿಮ್ಮ ಸರಸೂ ಮಕ್ಕಳನ್ನ ನೋಡೇ ಇಲ್ಲ........

ಆಕೆ—ಎಲ್ಲಾದರೂ ಉಂಟೆ?............ಇಲ್ಲಿದ್ದುಕೊಂಡು, ನಾವು ಕಾಗದ ಬರೆಯೋಣ ಅಂದರೇನು? ಹೈದರಾಬಾದ್ ಡಾಕ್ಟ್ರೇನೇ ಬೆಂಗಳೂರು ಡಾಕ್ಟರಿಗೆ

ಕಾಗದ ಬರೆದಿದಾರಂತೆ...... ಅಳಿಯನ ಕಣ್ಣಿಗೆ ನೀವು ಇಂತಿಂಥಾದ್ದು ಮಾಡಿ ಅಂತ........ನಾವು ಹೊರಡುತ್ತೇವೆ, ಸೀತಮ್ಮನವರೇ, ನೀವಿನ್ನೇನೂ ತಿಳಿದುಕೊಳ್ಳ ಬೇಡಿ, ಆಗಲೇ ಎರಡು ಗಂಟೆ ಆಗುತ್ತಾ ಬಂತು........

ಸೀ—ಸ್ವಲ್ಪ ಕಾಫಿ ಕುಡಿದು, ತಿಂಡಿ ತಿಂದು, ಸುಧಾರಿಸಿಕೊಂಡಾದ್ರೂ ಹೋಗಿ.

ಆಕೆ—ಛೆ! ಛೆ! ಈಗ ಅದೆಲ್ಲ ಬೇಡಿ, ಬೇಡಿ........ಅದಕ್ಕೆಲ್ಲ ನಿಲ್ಲಿಸಿಕೊಳ್ಳ ಬೇಡಿ........

ಸೀ—ನೋಡಿ ಲಕ್ಷ್ಮಮ್ಮನವರೇ, ಇಷ್ಟು ಹೊತ್ತಿನಲ್ಲಿ, ಕಾಫಿ ಇಲ್ಲದೆ ಮನೆ ಯಿಂದ ಇವರನ್ನ ಕಳುಹಿಸಬಹುದೇ ನಾನು? ನೀವಾದರೆ ಏನು ಮಾಡುತ್ತಿದ್ರಿ?

ಲ—ಅವರಿಗೆ ಅಷ್ಟು ಅವಸರ ಅಂದರೆ, ನೀವೇನು ಮಾಡುತ್ತೀರಿ, ಪಾಪ.....

ಡ್ರೈವರ್—ಅವ್ಮಾ........ಕಾರಿನಲ್ಲಿ ಹಾಸಿಗೆ, ಟ್ರಂಕು, ಎಲ್ಲಾ ಇಟ್ಟಾಯಿತು........ನಿಮ್ಮ ಜೊತೇಲೇ ಇಟ್ಟುಕೊಳ್ಳೋದು ಯಾವ್ಯಾವುದು?........

ಆಕೆ—ಯಾವುದೇನೋ?........ಒಂದು ಕೈ ಪೆಟ್ಟಿಗೆ, ಒಂದು ಕುಕ್ಕೆ........

ಡ್ರೈವರ್—ಹುಂ..........ಇಟ್ಟಾಯಿತವ್ಮಾ........ರೈಲು ತಂಬಿಗೆ ಮಾತ್ರ ನೀವು........

ಆಕೆ—ಅದನ್ನ ನಾನು ತರುತ್ತೇನೆ, ಹೋಗು........

ಸೀ—ಮಕ್ಕಳಿಗಾದರೂ ಒಂದೊಂದು ಬಟ್ಟಲು ಕಾಫಿ ಕೊಡ್ತೀನಿ........

ಆಕೆ—ಛೆ, ಛೆ! ಬೇಡಿ........ನಾಲ್ಕು ಗಂಟೆ ಹೊತ್ತಿಗೆ ದಾರೀಲೇ ಮದ್ದೂರು ಸಿಕ್ಕುತ್ತೆ........ಅಲ್ಲೇ ಕುಡಿಯುತ್ತವೆ. ಗಂಧದೆಣ್ಣೆ ಕಾರ್ಖಾನೆ ಹತ್ತಿರ ಎಲ್ಲಕ್ಕೂ ಒಂದೊಂದೆಳೆನೀರು ಕೊಟ್ಟಾಯಿತು........ಹುಂ........ನಾನು ಬರಲೇ ಹಾಗಾದರೆ? ....ನಿಮಗೆ ತುಂಬಾ ತೊಂದರೆ ಕೊಟ್ಟೆವು........

ಸೀ—ಅಯ್ಯೋ ಬಿಡಿ ಅಂದ್ರೆ........ತೊಂದರೆ ಅಂತೆ, ತೊಂದರೆ! ಯಾವ ಜನ್ಮದಲ್ಲಿ ಯಾವ ಪುಣ್ಯ ಮಾಡಿದ್ದೆವೋ, ನೀವು ಇಷ್ಟು ದಿನ ನಮ್ಮ ಮನೇಲಿದ್ದಿದ್ದಕ್ಕೆ! ನಿಮ್ಮ ಮಕ್ಕಳ ಮುದ್ದು ಮಾತೊಂದೇ ಸಾಕು........ನಾಳೆಯಿಂದ ಮನೆ ಬಿಕೋ ಅಂತ ಇರುತ್ತಲ್ಲಾ ಅದೇ ನನ್ನ ಯೋಚನೆ! ಆಸ್ಪತ್ರೆ ಅಪ್ರೇಷನ್ ಮುಗಿದ ಮೇಲೆ ಸರಸೂನೂ ಅಳಿಯನ್ನೂ ಮೈಸೂರಿಗೆ ಕಳುಹಿಸಿ........ಎಂಟು ಹತ್ತು ದಿನ ಇದ್ದು ಹೋಗಲಿ........ಕುಂಕುಮ ತೊಗೋಳಿ........ಹೋಗ್ಬಿಟ್ಟು ಬರ್ತೀರಾ?...... ಹುಂ........ಹುಂ, ಹುಂ........ಆಗಲಿ,........ಹೋಗ್ಬಿಟ್ಟು ಬರ್ತೀರಾ (ಆಕೆ ಹೊರಡು

ವರು)........ಅಂತೂ, ತೊಲಗಿತು, ಲಕ್ಷ್ಮಮ್ಮನವರೇ! ಬದುಕಿದೆ! ಒಂದು ದಿನವೇ, ಎರಡೇ?........ಹದಿನೈದು ದಿನವಾಯಿತಲ್ಲಾ........! ಮನೇಲಿ ಮೂರು ಕಾಸಿಲ್ಲ, ಸೊಸೈಟೀಲಿ ೩೦ ರೂಪಾಯಿ ಸಾಲ........ನನ್ನ ರಟ್ಟೆಯೆಲ್ಲಾ ಮುರಿದೇಹೋಯಿತು ....ಇವಕ್ಕೆ ಕೂಳು ಬೇಯಿಸಿ ಹಾಕಿ........ಜೊತೆಯಲ್ಲಿ ಓದಿದ್ದ ಗ್ರಹಚಾರಕ್ಕೆ!

ಲ—ಆಗೋ! ಮತ್ತೆ ಬಂದರು........ಸುಮ್ಮನಿರಿ, ಸೀತಮ್ಮನವರೇ! ಈಗಲೇ ರೇಗಬೇಡಿ........

ಸೀ—ಏನು? ಏನಾದರೂ ಮರೆತಿರೇನು?........

ಆಕೆ—ಅಯ್ಯೋ, ಏನೂ ಇಲ್ಲಾಂದ್ರೆ........ನಾವು ಹೊರಟ ಗಳಿಗೆ ಯಾಕೋ ಚೆನ್ನಾಗಿಲ್ಲವೋ ಏನೋ........ಕಾರು ಯಾಕೋ ತಂಟೆಮಾಡುತ್ತೆ........ನನಗೇಕೋ ಭಯವಾಗುತ್ತೆ ಅಮ್ಮ........

ಸೀ—ಭಯಾನೂ ಬೇಡ, ಏನೂ ಬೇಡ........ನಂಜುಂಡೇಶ್ವರನಿಗೆ ಬೆಳ್ಳೀಲಿ ಎರಡು ಕಣ್ಣು ಮಾಡಿಸಿ ಹಾಕ್ತೀನಿ ಅಂತ ಹರಕೆ ಹೊತ್ತುಕೊಳ್ಳಿ........ನಿಮ್ಮ ಅಳಿಯನಿಗೆ ಏನೂ ಆಗೋದಿಲ್ಲ........ಆಮೇಲೆ, ಹೇಳ್ತೀನೆ, ಕೇಳಿ........ನಿಮ್ಮ ಯಜಮಾನರು ನಾಲ್ಕು ಗಂಟೆ ರೈಲಿಗೆ ಹೋಗಲಿ!........ಸಾಯಂಕಾಲ ಏಳು ಗಂಟೇಗೆ ಬೆಂಗಳೂರು ಸೇರುತ್ತೆ........ನೀವು ಇಲ್ಲೇ ಇರಿ........ಕಾಗದ ಬರೋ ತನಕ........

ಆಕೆ—ಛೆ! ಛೆ! ನೀವು ಹೀಗೆಲ್ಲಾ ಬಲ್ವಂತ ಮಾಡಬೇಡಿ........ನಿಮಗೆ ಇಷ್ಟರವರೆಗೆ ನಾವು ಕೊಟ್ಟಿರೋ ಕಷ್ಟವೇ ಸಾಕು........

ಡ್ರೈವರ್—ಬನ್ನಿ ತಾಯಿ........ಮಿಸ್ಟೇಕ್ ಸರಿಹೋಯ್ತು........ರಾಯರು ಕರೀತಾರೆ, ಬೇಗ ಬರಬೇಕಂತೆ........

ಸೀ—ಕಷ್ಟ ಏನು ಬಂತು? ಕಷ್ಟ? ನಿಮ್ಮ ಅಳಿಯನ ಚಿಕಿತ್ಸೆ ಇಲ್ಲೇ ಆಗಲಿ, ಇವರ ಹತ್ತಿರಾನೇ ಹೇಳುತ್ತೇನೆ........ಅವರ ಸ್ನೇಹಿತನನ್ನೇ ಗೊತ್ತು ಮಾಡೋಣ ....ಸುಲಭವಾಗಿ ಆಗುತ್ತೆ........

ಆಕೆ—ಎಲ್ಲಾ ನಿಮ್ಮ ಆಶೀರ್ವಾದ............ಸುಲಭದಲ್ಲೇ ವಾಸಿಯಾಗಲಿ ಸೀತಮ್ಮನವರೇ........ನಾನು ಬರ್ತೀನಿ........ನಂಜುಂಡೇಶ್ವರನೇ ಕಾಪಾಡಬೇಕು ....ಬೆಳ್ಳಿ ಕಣ್ಣು ಮಾಡಿಸಿ ಹಾಕ್ತೇನೆ........ಬರ್ತೀನಮ್ಮಾ........ಹಾರ್ನ್ ಮಾಡ್ತಿ ಹಾರೆ........

ಸೀ—ನೋಡಿ, 'ಅಳಿಯನ್ನೂ ಸರಸೂನೂ ಕರಕೊಂಡು ಬಂದು, ಇಲ್ಲೂ ಇದ್ದು, ನಂಜುಂಡೇಶ್ವರನ ದರ್ಶನಾನೂ ಮಾಡಿಸಿ, ಆ ಮೇಲೆ ಹೈದರಾಬಾದಿಗೆ ಕಳುಹಿಸಿ........ಸರಿ........ಹೋಗ್ಬಿಟ್ಟ ಬನ್ನಿ........ದೇವರಿದಾನೆ......ಏನೂ ಭಯ

ಪಡಬೇಡಿ........ಆಗಲಿ........ಹುಂ........ಹುಂ........(ಆಕೆ ಹೊರಡುವರು) .... ಹಾಳಾಗಿ ಹೊಯ್ತು, ಲಕ್ಷ್ಮಮ್ಮನವರೇ, ಅರ್ಧ ದಾರೀಲೇ ಇವರ ಕಾರು ಕೆಟ್ಟು, ಕೂತುಕೋಬೇಕು, ಇವರ ಜಂಬಕ್ಕೆ! ಒಂದು ದಿವಸ ಕೂಡ, ನೀನೂ ಬರ್ತೀಯಾ ಅಂತ ನನ್ನನ್ನ ಕೇಳಿಲ್ಲ! ನಾನು ಅವರ ಜೊತೇಲಿ ಕೂತರೆ ಅವರಿಗೆ ಅವಮಾನವೋ ಏನೋ!........ಹೋಗ್ಲಿ........ನಾನು ಬೇಡ........ಲಲಿತೂನ? ಲಲಿತೂನ ಕೂರಿಸ ಬಾರದೆ?........ಊಹುಂ!........ಹಾಳು ಜನ!........ಇವರ ಅಳಿಯನಿಗೆ ಕುರುಡು ಬಂದರೆ ನನಗೇನಂತೆ?........ಅಂತೂ, ಆ ಕಾಗದ ಬಂದು, ನಾನು ಬದುಕಿದೆ, ಲಕ್ಷ್ಮಮ್ಮನವರೇ!........

ಲ—ಅಕೋ........ಮತ್ತೆ ಬಂದರು ಅವರು........!

ಸಿ—ಇದೇನಿದು, ಶನಿ, ಲಕ್ಷ್ಮಮ್ಮನವರೇ!........ಮತ್ತೆ ಬಂತೆ?

ಲ—ಜೊತೇಲಿ ಇನ್ನೂ ಯಾರೋ ಬರ್ತಾ ಇದಾರೆ........!

ಸೀ—ಆ?


ಆಕೆ—ಸೀತಮ್ಮನವರೇ! ಇವಳೇ ನನ್ನ ಮಗಳು, ಸರಸು! ಈಗ ಬಂದಳು, ಬೆಂಗಳೂರಿಂದ! ಸರಸು ಗಂಡನೂ ಬಂದಿದಾನೆ........ಬೆಂಗಳೂರಿಗೆ ಬೆಳಿಗ್ಗೆ ಬಂದು ವಿಚಾರಿಸಿದಾಗ, ಆ ಡಾಕ್ಟರಿಗೆ ಮೈಸೂರಿಗೇ ವರ್ಗವಾಗಿದೆ ಅಂದರಂತೆ........ಸರಿ! ಕಾರು ಮಾಡಿಕೊಂಡು ಇಲ್ಲಿಗೇ ಬಂದುಬಿಟ್ಟರು........ಡ್ರೈವರ್!........ಸಾಮಾನೆಲ್ಲಾನೂ ಒಳಗಿಟ್ಟುಬಿಡೋ!........ನೀವು ಹೇಳಿದ ಹಾಗೇ ಆಯಿತು, ನೋಡಿ ....ನಿಮ್ಮ ಆಶೀರ್ವಾದ ಫಲಿಸಿತು! ಇಲ್ಲೇ ಎಲ್ಲರೂ ಇದ್ದು, ಆಸ್ಪತ್ರೇಲೋ, ನಿಮ್ಮ ಯಜಮಾನ ಸ್ನೇಹಿತರ ಹತ್ತಿರವೋ ಚಿಕಿತ್ಸೆ ಮುಗಿಸಿಕೊಂಡು, ನಂಜುಂಡೇಶ್ವರನ ದರ್ಶನ ಮಾಡಿಕೊಂಡು, ಬೆಳ್ಳೀಲಿ ಕಣ್ಣು ಮಾಡಿಸಿ ಹಾಕಿ, ಆಮೇಲೇನೇ ಹೊರಟರಾಯಿತು........ನನಗಿನ್ನೇನು? ಬೆಂಗಳೂರಲ್ಲಿ ಕೆಲಸ?

ಸೀ—ಲಕ್ಷ್ಮಮ್ಮಾ...... ಒಳಗಿಂದ ಕೊಂಚ ಕುಡಿಯೋ ನೀರು ತರ್ತೀರಾ?

ಆಕೆ—ಏನಿದು?........ಸೀತಮ್ಮನವರೇ........ತಲೆ ಸುತ್ತುತ್ತಿದೆಯೇ?........ ಆ?........ಸರಸೂ........ಹಿಡಿದುಕೋ ಅವರನ್ನ........ಹಾಗೆ........ಹಾಗೆ........ ನೀರು ಚುಮುಕಿಸು ಮುಖದ ಮೇಲೆ..............

—ಶ್ರೀಮತಿ ಕೇಸರಿ.

———o———



ನವೀನ ಗಾದೆಗಳು

(ಯಲೆಕ್ಷನ್ ಸಂಬಂಧ)

ರಾಯರಿಗೆ ಓಟು ಕೊಟ್ಟರೂ, ಮೋರಿವಾಸನೆ ತಪ್ಪೋದಿಲ್ಲ.

ಗಲ್ಲಿ ಗಲ್ಲಿ ತಿರುಗಿ ಇಲ್ಲ ಅನ್ನಿಸಿಕೊಂಡ

ಚಮತ್ಕಾರವಿದ್ದರೂ, ಪಷಟ್ಕಾರವೇ.

ಕೊಡುವುದು ಒಂದು ಓಟು ; ಬಿಡುವುದು ನೂರು ಬುರುಡೆ.

ಕೈತುಂಬ ಕೊಟ್ಟರೂ, ಕೈಕೊಟ್ಟರಲ್ಲಾ !

ಚುನಾವಣೆಯ ಕಾಲದಲ್ಲಿ, ಛಲಾವಣೆ ಎಲ್ಲ ಹೋಟಾಗಳೇ !

ಬೀದೀಲಿ ಹೋಗುವ ಮಾರೀನ ಪೋಲಿಂಗ್ ಬೂತ್ ಹೊಕ್ಕು ಹೋಗು, ಅಂದ ಹಾಗೆ !

ನಗರ "ಪಿತೃ"ಗಳಿಗೆ ಕೊಡುವ ಓಟುಗಳೇ ಪಿಂಡ.

ಹೋಗೋ ಸೀಟು ಕೂಗಿದರೆ ಬಂದೀತೆ ?

ಗೆದ್ದೋರಿಲ್ಲ ಗಟ್ಟಿ ; ಸೋತೋರಿಲ್ಲ ಸಾಚಾ.

ಪೋಲಿಂಗ್ ಬೂತೊಳಗೆ ಭೂತ ಕೂತ ಹಾಗೆ.

ಸೋತರೂ ನಾತ ಹೋಗಲಿಲ್ಲ. —ನಾ. ಕ.

ಅಮರ ಪಾಠ

ಮುನಿಸಿಪಲ್ ಚುನಾವಣೆಯಲ್ಲಿ ಅಪಜಯ ಹೊಂದಿದವರೊಬ್ಬರು ತಮ್ಮ ಮಗನಿಗೆ ಅಮರಕೋಶ ದ್ವಿತೀಯ ಕಾಂಡ ಹತ್ತನೆಯ ವರ್ಗವನ್ನು ಹೇಳಿಕೊಡುತ್ತಿದ್ದಾಗ, ಓಟರುಗಳ ಮೇಲಿನ ಕೋಪದಿಂದ ಆದ ಪಾಠಾಂತರ:—

ಜಂಭಕಾರಃ ಕಿಲಾಡಿಸ್ಯಾತ್ ಬಲುಭಂಡಸ್ತು ಲೇಟಕಃ
ಹರಕು ಬಾಯಃ ಕುಚೋದ್ಯ ಸ್ಯಾತ್ತ್ರೊಸ್ನು ಪ್ಯೈಯಸ್ತ್ವನಾಚಿಕಃ
ಲಾಗಾ ಚೀಪಶ್ಚಕ್ರಶೂರೋ ಕಲಾಯೋ ಪಳ್ಳಿಕಾರಕೇ
ಸ್ಯಾತ್ ಶಾಂಖಿಕಃ ಕಂಚಿ ಕೀಳಃ ಲೇವಾದೇಹೀತು ಕೇವಲಃ
ತುರೀ ಮುಂಡೀ ನಹಿ ಖಾತ್ರಿರ್ನಾ ಪಿತಾದ್ವಂದ್ವ ಬಾಯಿನಃ
ನಿರ್ವೀರಕ ಸ್ಯಾದ್ರಜಕ ಸ್ಸೌಂಡಿಕೋ ಮಂಡೆ ಹಾರಕಃ
ಕುಹಕಸ್ಯಾತ್ ಕೌಸ್ತಿಕೋ ಮೋಸಗಾರ್ಶ್ಚೇಂದ್ರಜಾಲಿಕಃ
ಮಾಯಾವೀ ಡಾಂಭಿಕೋ ಚೋರಃ ಕಜ್ಜೀ ಕಾಪಟಿಕೋಽಧಮಃ
ಲಂಚಕೋ ವಂಚಕಶ್ಚೈವ . . . . . . ಇತ್ಯಾದಿ.

ಟೀಕಾ—ಲೇಟಕಃ - ಪೋಲಿಂಗ್ ಬೂತಿಗೆ ಲೇಟಾಗಿ ಹೋದವನು.
ಚಕ್ರಶೂರಃ - ಚಕ್ಕರ್ ಕೊಡುವುದರಲ್ಲಿ ಶೂರ.
ಶಾಂಖಿಕಃ - ಶಂಖವಾದ್ಯ ಪ್ರವೀಣ.
ಲೇವಾದೇಹೀ - ಲೇವಾದೇವಿಯಿಂದಲೇ ದೇಹ ಬೆಳಸಿದವನು.
ನಹಿಖಾತ್ರಿಃ - ಖಾತ್ರಿ ಅಲ್ಲದವನು.
ನಾ ಪಿತಾ - ಮಕ್ಕಳಿಲ್ಲದವನು.
ರಜಕಃ - ಚುನಾವಣೆಯ ದಿನ ರಜಪಡೆದು ಊರಿಂದ ಹೊರಟು ಹೋದವನು.
ಸೌಂಡಿಕಃ - ಶಬ್ದಜೀವಿ. ಉಪನ್ಯಾಸಕ. —ನಾ. ಕ.

ಸಿರಿ

ಪ್ರಿಯ ಸಂಪಾದಕರೇ !

ಕವಿತಾ ಪ್ರಪಂಚಕ್ಕೆ ಹೊಕ್ಕಿರುವ ಪುರುಷರೆಲ್ಲರೂ ಸಾಮಾನ್ಯವಾಗಿ ಸ್ತ್ರೀ ರೂಪವನ್ನು ವರ್ಣಿಸಿರುವರು. ವಿ.ಸೀ.ಯಂತಹ ಉದ್ದಾಮರೂ ಕೂಡ ತಮ್ಮ ಮನಕ್ಕೆ ಒಪ್ಪಿಗೆಯಾಗಲು ಸ್ತ್ರೀ ಹೇಗೆ ಹೇಗಿರಬೇಕೆಂಬುದನ್ನು ಸಿರಿ ಎಂಬ ಪದ್ಯದಲ್ಲಿ ವಿವರಿಸಿದಾರೆ. ಆದರೆ, ಹೆಣ್ಣಿಗೆ ಮಾತ್ರ ಈ ಸ್ವಾತಂತ್ರ್ಯವಿಲ್ಲ. ತನ್ನ ಒಲುಮೆಯನ್ನು ಪಡೆಯಲು ಗಂಡು ಹೇಗೆ ಹೇಗಿರಬೇಕು, ಎಂದು ಯಾರೂ ಪದ್ಯ ಬರೆದಿಲ್ಲ. ಬರೆದು ಪ್ರಕಟಿಸಿದರೆ ತನ್ನ ಗುಣಶೀಲಗಳು ಎಲ್ಲಿ ಕಲುಷಿತವಾಗುವವೋ ಎಂಬ ಭೀತಿ ಹೆಣ್ಣು ಹೃದಯಕ್ಕೆ ಅಲ್ಲದೆ, ಕೊರವಂಜಿಯ ಹತ್ತಿರ ಹೆಣ್ಣುಮಕ್ಕಳು ತಮ್ಮ ಪ್ರಿಯರ ವರ್ಣನೆ ಮಾಡುವುದರಲ್ಲಿ ಒಂದು ಔಚಿತ್ಯವೂ ಉಂಟು. ನನ್ನ ಪದ್ಯವನ್ನು ನೀವು ಪ್ರಕಟಿಸಿದರೆ, "ಮೂಕಂ ಕರೋತಿ ವಾಚಾಲಂ" ಎಂಬಂತೆ, ಮೂಕರಾದ ಸ್ತ್ರೀಸಮೂಹಕ್ಕೆ ನೀವು ನಾಲಿಗೆ ನೀಡಿದಂತಾಗುತ್ತದೆ. ನನ್ನ ಪದ್ಯ ವಿ. ಸೀ. ಯವರ ಸಿರಿಯಂತೆಯೇ ಇದೆ. ಅದನ್ನು ಓದಿದ ಕೂಡಲೇ ಇದನ್ನೋದಬಹುದು. ಅಥವಾ, ಇದನ್ನೋದಿದ ಮೇಲೆ ಅದನ್ನು ಓದಬಹುದು.

ಶ್ರೀಮತಿ ರುದ್ರಮ್ಮ.

ಸಿರಿ ಅಥವಾ ಹೆಣ್ಣಿನ ಬಯಕೆ

- ೧ -

ಮುಂಕರ್ಲು ಮುಂದುಗಡೆ ಗಾಳಿಯಲಿ ಹಾರುತಿರೆ,
ಹಿಂದುಗಡೆ ನುಣುಪಾಗಿ ಹೊಸ ಕ್ರಾಪು ಮಿನುಗುತಿರೆ,
ಇಂದ್ರಭವನದ ಹೊಸಲ ನಿಲುವಿನಲಿ ರಂಜಿಸಿರೆ,
ಸೇದುಗಿದ ಬಿಳಿಹೊಗೆಯು ತುಟಿಯಿಂದ ಬರುತಲಿರೆ,
ಅದುವೆ ಸಿಂಗರವೆನ್ನ ಕಣ್ಗೆ ಚೆಲುವು.

- ೨ -

ಇಲ್ಲದಿರೆ ಕ್ಲೋಸಾಗಿ ಸಮವಾಗಿ ಕತ್ತರಿಸಿ,
ಬುರುಡೆ ಸರಿಮಧ್ಯದಲಿ ಕಾಸಗಲವುಳಿಸಿ,
ಸಂಪಿಗೆಯ ಕೇತಕಿಯ ಚೆಂಗುಲಾಭಿಯ ದಳವ
ಕಿರು ಜುಟ್ಟಿ ಗಂಟಿನಲಿ ಘಮಘಮನೆ ಸೂಡಿರಲು
ಅದುವೆ ಸಿಂಗರವೆನ್ನ ಬಗೆಗೆ ನಲವು.

– ೩ –

ಕಿವಿಸಮಕೆ ವಪನವಿರುತಿ, ಕೊರಳಲ್ಲಿ ಟೈಪಿನ್ನು,
ನಾಸಿಕದ ಕೆಳಗಡೆಗೆ ಮಿರುಮಿರುಗು ಮೀಸೆ,
ನೇರಾದ ಬೈತಲೆಗು ಕೊರಲ ಗುಂಡಿಯು ನೆಲೆಗು
ಸರಿಯಾಗಿ ಬಾಯಲ್ಲಿ ಉರಿವ ಸಿಗರೇಟಿರಲು,
ಅದುವೆ ಸಿಂಗರವೆನ್ನ ಮನಕೆ ಸೊಗಸು.

– ೪ –

ಒಂದು ಮೊಳದುದ್ದದಾ ಕೆಂಪು ಬಣ್ಣದ ಟೈಯು,
ಬಿಳಿಯ ಟ್ರೌಸರು, ತೆರೆದ ಸಿಲ್ಕು ಷರ್ಟು,
ಟೆನ್ನೀಸು ಕೋರ್ಟಿನಲಿ ತೋಳೆತ್ತಿ ಬೀಸುತಿರೆ,
ಕೈಬ್ಯಾಟು ಚಂಗೆಂದು ಠೇಂಕಾರ ಮಾಡುತಿರೆ
ಅದುವೆ ಸಿಂಗರವೆನ್ನ ಕಿವಿಗಳಿಂಪು.

– ೫ –

ದಿಟ್ಟವನ ಧೈರ್ಯಗಳ ನೊಳಗದುಮಿ ಹಿಡಿವ ತುಟಿ,
ಸೊಟ್ಟಿಲ್ಲದಾ ಮೋರೆ, ತಿಳಿವಿನಗಲದ ಹಣೆಯು,
ಹೊಳೆವ ಶಿವನೆಲಗಂತೆ ಮಿಂಚಿ ಕೊರೆಯುವ ಕಣ್ಣು,
ನಗುವಿನಲಿ ಗುಳಿತೋರಿ ಸೆಳೆವ ಸುಳಿಗಲ್ಲವಿರೆ,
ಅದುವೆ ಸಿಂಗರವೆನ್ನ ಪರ್ವಸಿರಿಯು.

– ೬ –

ಕತ್ತಲಾಗುವ ಮುಂಚೆ ಮನೆಗೆ ಬಾರದುದೇಕೆ ?
ಇಂದೇಕೆ ಅರಸಿನದ ಕುಂಕುಮದ ಯಾತ್ರೆ ?
ಎಂದೆನ್ನ ಮೊಗವೆತ್ತಿ ಮೆಲು ದನಿಯ ಸೊದೆಬೀರಿ
ಆಗಲೇ ಸಿನಿಮನೆಗೆ ಹೊರಡಿಸಲು ಕಾತುರದಿ
ಅದುವೆ ಸಿಂಗರವೆನ್ನ ಎದೆಯ ಸೊದೆಯು.

– ೭ –

ಚಾಕರಿಯ ಕಿರುಕುಳದಿ ಪ್ರೋಕರಿಗಳೆಲ್ಲರೂ
ಹೊರಲೋಕ ಹೊಯ್ದಟ್ಟಿ ಘಾತಿಸಿರಲಿ !
ನಿಮ್ಮ ಹೆಣ್ಣಾದಿವಳು ಮಿಡಿವ ಕಂಬನಿಗಳಲಿ
ಕಹಿಹೋಗಿ ಸಿಹಿ ಎಂದು ನೀವವನು ಮರೆಯುತಿರೆ
ಅದುವೆ ಸಿಂಗರವೆನ್ನ ಸುಖಕೆ ಸುಗ್ಗಿ.

ಆ ಮೊಗವೆ, ಆ ಬಾಚೆ, ಆ ಹಣೆಯೆ, ಆ ಮೂಗೆ,
ಕಿರುಮೀಸೆ, ನಿಡುಜುಬ್ಬ, ಬಿಳಿಯ ಪೈಜಾಮವೇ,
ನಿಮ್ಮ ಬಾಳಿನ್ನ ಬಾಳ್ ನಗೆಗೂಡಿ ಸಾಗಿಬರೆ,
ನಮ್ಮ ಸಂಕಟವೆಲ್ಲ ಧೂಳಾಗಿ ಹಾರುತಿರೆ,
ಎನ್ನ ಗರತಿಯ ಭಾರ ಹೊರೆಹರಿವುದು.

—ಶ್ರೀಮತಿ ರುದ್ರಮ್ಮ.

—o—

ಬೆಂಗಳೂರಿನಲ್ಲಿ ಭಿಕ್ಷುಕರಿಗಿಂತ ಹೆಚ್ಚು ನಾಯಿಗಳಿವೆ, ಇದರ ಪರಿಹಾರಕ್ಕೇನಾದರೂ ಮಾಡಿದರೆ ಒಳ್ಳೆಯದು.

(ಸದಸ್ಯರೊಬ್ಬರು)

—ನಾಯಿಗಳಿಗಿಂತ ಹೆಚ್ಚು ನೊಣಗಳಿವೆ, ಇದರ ಪರಿಹಾರಕ್ಕೇನಾದರೂ ಮಾಡಿದರೆ ಒಳ್ಳೆಯದು.

(ಸ್ಯಾನಿಟರಿ ಇನ್ಸ್‌ಪೆಕ್ಟರ್)

* *

ನಮ್ಮ ದೇಶದ ರೈತನಿಗೆ ಹುಲ್ಲು ಬೆಳೆಯುವುದಕ್ಕೆ ಬರದು.

(ಸದಸ್ಯರೊಬ್ಬರು)

—ಹೌದು, ಪೈರಿನ ನಡುವೆ ಬೆಳೆದಿರುವ ಹುಲ್ಲನ್ನು ಅವನು ಕಿತ್ತೆಸೆಯುವುದನ್ನು ನಾವು ಕಂಡಿದ್ದೇವೆ.

* *

ಒಂದು ಮೊಟ್ಟೆಗೆ ಮಿಲಿಟರಿಯವರು ೨ ಆಣೆ ಕೊಡುತ್ತಾರೆ ಸ್ವಾಮಿ.

(ಸದಸ್ಯರೊಬ್ಬರು)

—ಆದಕ್ಕೇ ಇರಬೇಕು, ಈಗ ಎಲ್ಲೆಲ್ಲೂ ಜಂಬದ ಕೋಳಿಗಳು ಜಾಸ್ತಿ.

* *

ಆಹಾರ ಸಮಸ್ಯೆ

(ಪ್ರತಿನಿಧಿಗಳ ಸಲಹೆಗಳು)

“ಎಲ್ಲವನ್ನೂ ಜನರ ಸಲಹೆಯ ಮೇರೆಗೇ ವ್ಯವಸ್ಥೆ ಮಾಡುತ್ತೇವೆ”

(ಆಹಾರ ಶಾಖಾಧಿಕಾರಿ)

(ಆರಿಸಿದ್ದು)

—ಸರ್ಕಾರದವರ ಈಗಿನ ವ್ಯವಸ್ಥೆ ಶ್ಲಾಘನೀಯವಾಗಿದೆ; ಆದರೆ, ಅನೇಕ ರೈತರಿಗೆ ತೊಂದರೆಯಾಗಿದೆ—ಕಮ್ಯಾಂಡಿಯರಿಂಗ್ ಬೇಡ, ಕಂಟ್ರೋಲ್ ಬೇಕು—ಈಗಲಾದರೂ ಕಮ್ಯಾಂಡಿಯರಿಂಗನ್ನು ಸರಿಯಾಗಿ ಮಾಡಬೇಕು—ದವಸ ಹೊರಗೆ ಬರಬೇಕಾದರೆ, ಧಾರಣೆ ಹೆಚ್ಚಿಸಲೇ ಬೇಕು—ದರವನ್ನು ಇನ್ನೂ ಹೆಚ್ಚಿಸಬಾರದು, ಇಲ್ಲವಾದರೆ ಮುಚ್ಚಿಡುತ್ತಾರೆ—ರೈತನಿಗೆ ಹೆಚ್ಚು ಬೆಲೆ ಕೊಡಬೇಕು, ಕೊಂಡ ಬೆಲೆಗೆ ಇತರರಿಗೆ ಮಾರಬೇಕು—ಜನ ಕೇಳುವ ಕಡೆ ಜಮೀನಿಲ್ಲ, ಜಮೀನಿರುವ ಕಡೆ ಜನವಿಲ್ಲ—ಜಮೀನಿರುವವರಿಗೇ ಜಮೀನನ್ನು ಕೊಡುತ್ತಿದ್ದಾರೆ—ಟಾರ್ ರೋಡಿನಲ್ಲಿ ಆಹಾರ ಬೆಳೆಯಲು ಸಾಧ್ಯವಿಲ್ಲದಿದ್ದರೆ, ತಾರ್ಸೀ ಮೇಲೆ ಬೆಳೆಯಲಿ—೧೮೬ ಲಕ್ಷ ಪಲ್ಲ ದವಸ ನಮ್ಮಲ್ಲಿದೆ, ತಲಾ ಅರ್ಧ ಸೇರು ಪಡಿ ಕೊಟ್ಟರೂ ಇದು ಸಾಕಾಗುತ್ತದೆ—ಈಗಿರುವ ಆಹಾರ ಸಾಲದು, ಇನ್ನೂ ಹೆಚ್ಚಬೇಕು—ಕಷ್ಟ ಸಮಯದಲ್ಲಿ ಮಲೆನಾಡಿನವರು ೨ ಲಕ್ಷ ಪಲ್ಲ ದವಸ ಒದಗಿಸಿದರು—ಮಲೆನಾಡಿನ ಅಕ್ಕಿಯಲ್ಲಿ ಸಾರ ಕಮ್ಮಿ—ಅಳೆಯುವವರು ೮ ಸೇರನ್ನು ೯ ಸೇರು ಮಾಡಬಲ್ಲರು—ಅಳೆಯುವವರು ಬೇರೆ ಯಾಕೆ? ಬೆಳೆದು ತಂದು ಕೊಡುವವನೇ ಅಳೆದು ಕೊಡುತ್ತಾನೆ—ನಮಗಿಂತ ಹೆಚ್ಚು ಆಹಾರ ಮಕ್ಕಳಿಗೆ ಬೇಕು—ಗಂಡಸರಿಗೆ, ಮಕ್ಕಳಿಗೆ ಬಡಿಸಿದ ಮೇಲೆ, ಹೆಂಗಸರಿಗೆ ಏನೂ ಉಳಿಯುವುದಿಲ್ಲ—ಹೆಂಗಸರಿಗೆ ಬೇರೆ ಡಿಪೋ ಇಡಿಸಬೇಕು—ಗಡಿ ಕಡೆಯ ದವಸವನ್ನ ಸಂಸ್ಥಾನದ ಮಧ್ಯಕ್ಕೆ ತರಬೇಕು—ಗಡಿಯಲ್ಲಿ ಹೆಚ್ಚು ಬೆಲೆಗೆ ಮಾರಬೇಕು—ಸರ್ಕಾರದವರೇ ಸ್ವಂತವಾಗಿ ಹಂಚಿಕೆ ಕೆಲಸ ನಡೆಸಬೇಕು—ಜವಾಬ್ದಾರಿ ಸರ್ಕಾರವೊಂದೇ ಈ ಸಮಸ್ಯೆಯ ಪರಿಹಾರಕ್ಕೆ ಸಾಧನ—ಸೊಸೈಟಿಗಳಿಗೆ ಈ ಜವಾಬ್ದಾರಿ ವಹಿಸಿದರೆ, ಬಹಳ ಅನುಕೂಲವಾಗುತ್ತೆ—ಪಟೇಲ್, ಶ್ಯಾನುಭೋಗರಿಗೆ ಅವಕಾಶ ಕೊಟ್ಟರೆ, ಅವರು ಸೇವೆ ಮಾಡಬಲ್ಲರು—ಸೊಸೈಟಿಗಳಿಗಿಂತ ವರ್ತಕರಿಗೆ ಮಾರಲು ಅನುಕೂಲ ಕೊಡಬೇಕು—ಯಾಕ ಕಂಟ್ರೋಲ್ ತೆಗೆಯುತ್ತೀರೋ, ಯಾಕ ಹಾಕುತ್ತೀರೋ, ಗೊತ್ತಿಲ್ಲ—ಧರ್ಮದ ಛತ್ರ ಇಟ್ಟು ೭೨ ಲಕ್ಷ ಪ್ರಜೆಗಳಿಗೂ ಅನ್ನದಾನ ಮಾಡಿಬಿಡಿ, ಸ್ವಾಮಿ—ಒಟ್ಟಿನಲ್ಲಿ ಇದು ಬಹಳ ಕಷ್ಟವಾದ ಸಮಸ್ಯೆ.

ಅನರ್ಥಕೋಶ

(ಮುಂದುವರಿದದ್ದು)

ಅಯ್ಯೋ—ಕನ್ನಡಿಗರ ಒಂದು ಕಿರಲು; ಅಕಟಕಟ ಎಂದು ಹೇಳುವುದು ಕಷ್ಟವಾಗಿ ಕಂಡು ಬಂದದ್ದರಿಂದ ಜನರು ಇದನ್ನೇ ಬಳಸಿಕೊಂಡಿರುವರು. ನಮ್ಮನ್ನು ನೋಡಿ ತಮಿಳರೂ ಕೂಡ 'ಅಯ್ಯೋ' ಅನ್ನುತ್ತಿದಾರೆ.

ಅವರ ಜನ—ತಂಕಣ ನೆರೆಯುವರು; ಹಲವರು ಜೊತೆಯುವರು.

ಅರಸ—'ಅ' ಎಂಬುದನ್ನು ನೋಡಿ.

ಅರಿಷಡ್ವರ್ಗ—ಸಾಲ, ಗಾನ, ಪದ್ಯ, ಮದ್ಯ, ಸಿನಿಮ, ಚಂದ—ಎಂಬಿವೇ ಅರಿಷಡ್ವರ್ಗ.

ಅಲಂಕಾರ—ಡಾರ್ವಿನ್ನನು ಹೇಳುವ ಮೊದಲೇ ಕನ್ನಡಿಯ ಮೂಲಕ ತಾವು ಕಪಿ ಸಂತತಿ ಎಂದು ತಿಳಿದುಕೊಂಡ ಸ್ತ್ರೀಪುರುಷರು ಅನುಸರಿಸುವ ಆತ್ಮವಂಚನೆಯ ವೈಖರಿ.

ಅಲ್ಪಪ್ರಾಣ—ಕನ್ನಡದಲ್ಲಿ ಎಲ್ಲವೂ ಅಲ್ಪಪ್ರಾಣಗಳೇ.

ಅವತಾರ—ಇವರಲ್ಲಿ ಬಹುಮಂದಿ ಹುಚ್ಚಾಸ್ಪತ್ರೆಗಳಲ್ಲಿರುವರು; ಉಳಿದವರು ಹೊರಗಿದ್ದು ತಮ್ಮ ಶಿಷ್ಯರನ್ನು ಅಲ್ಲಿಗೆ ಕಳುಹಿಸುತ್ತಿರುವರು.

ಅವಮಾನ—ತೆಳುವಾದ ಚರ್ಮವಿರುವವರಿಗೆ ಬರುವ ಒಂದು ರೀತಿಯ ವ್ಯಾಧಿ.

ಅಷ್ಟಾವಕ್ರ—ಸದಾ ಮೂರನೆಯ ತರಗತಿಯಲ್ಲೇ ರೈಲುಪ್ರಯಾಣ ಮಾಡುವವರ ಬೆನ್ನೆಲುಬುಗಳ ರೂಪು; ಆಧುನಿಕ ವಿದ್ಯಾಪೀಠಗಳಲ್ಲಿ ವ್ಯಾಸಂಗ ಮಾಡುವವರ ಬುದ್ಧಿ ಬಗ್ಗಿರುವ ರೀತಿ.

ಅಸೂಯೆ—ನೌಕರೀ ಲೋಕದಲ್ಲಿ ಗ್ರೇಡುಗಳಿಂದಲೂ, ಬಿರುದುಬಾವಲಿಗಳಿಂದಲೂ ಶಾಲೆಗಳಲ್ಲಿ ಬಹುಮಾನಗಳಿಂದಲೂ, ಕಾರಾಗೃಹಗಳಲ್ಲಿ ಎ. ಬಿ. ಸಿ. ಕ್ಲಾಸುಗಳಿಂದಲೂ, ಕೆರಳಿಸಿ ನೆಲೆಗೊಳಿಸುವ ವಿಷವೃಕ್ಷ.

ಅಹಂ-ಕಾರ—ಇತರರೆಲ್ಲರೂ ಸಪ್ಪೆ ಎಂಬ ತಪ್ಪು ತಿಳಿವಳಿಕೆ.

ಅಳತೆ—ಇಂದ್ರಜಾಲಕ್ಕೆ ಸೇರಿದ ಮಾಟ.

ಅಳಿಯ—ಹನ್ನೊಂದನೆಯ ಗ್ರಹ. ಹತ್ತನೆಯ ಗ್ರಹವಾದ ಸತ್ಯಾಗ್ರಹಕ್ಕಿಂತ ಬಲವತ್ತರ.

ಅಳು—ಎಲ್ಲಾ ವಯಸ್ಸಿನ ಶಿಶುಗಳೂ ಇದರಿಂದಲೇ ಹಾಲನ್ನು ದಕ್ಕಿಸಿಕೊಳ್ಳುವುದು.

ಅಕ್ಷಿ—ಒಂಟಿ ಶೀನು, ಶಕುನ ಶಾಸ್ತ್ರ ರೀತ್ಯಾ, ಅಮಂಗಳ.

—ಖಾರಾಂತ.

ಹೆಣ್ಣೆಗರು

—ಬನ್ನಿ, ತಮ್ಮಯ್ಯನವರೇ! ಬನ್ನಿ! ಏನಿದು ನಡೆದುಕೊಂಡೇ ಹೊರಟಿರಲ್ಲಾ, ಗಾಡಿ ಸಿಗಲಿಲ್ಲವೇ? ಕೋರ್ಟಿಗೇನು?

—ಯಾರು ಪುಟ್ಟೇಗೌಡರೇ?........ಗೊತ್ತಾಗಲಿಲ್ಲ; ಗುರುತು ಸಿಕ್ಕಲಿಲ್ಲ; ಕಣ್ಣು ಕೊಂಚ ಮಂಜು........ಕೋರ್ಟಿಗಲ್ಲ, ಅಂದರೆ........

—ಬನ್ನಿ! ಕೂತುಕೊಳ್ಳಿ.......ಹೋಗೋಣ ಅಂತೆ. ಅಲ್ಲೇ ಕೂಡಿ........ಕಂಬ ಇದೆ ಬೆನ್ನಿಗೆ!

—ನಶ್ಯಮಾಡಿದೀರೇನು? ಹೊಸದಾಗಿ?

—ಇಕೋ ತಯಾರಾಗಿದೆ........ಈಗ ತಾನೆ ಚಿಟಕಿ ಮಾಡಿ ಡಬ್ಬಿಗೆ ಸೇರಿಸುತ್ತಾ ಇದೇನೆ.......ಒಪ್ಪಿಸಿಕೊಳ್ಳಿ........ಬಿಸಿಲೇರುತ್ತಾ ಬಂತಲ್ಲಾ........ಕೋರ್ಟಿಗಲ್ಲದೆ ಮತ್ತಿನ್ನೆಲ್ಲಿಗೆ?

—ಟ್ರೆಜರಿಗೆ ಹೋಗಬೇಕಾಯಿತು........ಮೂರು ತಿಂಗಳಿಂದ ಪೆನ್ಶನ್ ಹಣ ತೆಗೆದುಕೊಂಡಿರಲಿಲ್ಲ........

—ಏಕೆ?

—ಉಂಡೆಯಾಗಿ ಒಂದಿಷ್ಟು ಕೂಡಿ ಬರಲಿ? ಶಿವಗಂಗೆಗೆ ಒಂದು ಸಲ ಹೋಗೋಣ ಅಂತ ಇಟ್ಟಿದ್ದೆ........ಮೊನ್ನೆ ಮೊಮ್ಮಗನಿಗೆ ಬೆಳಗೊಳದಲ್ಲಿ ಚಾಕರಿ ಸಿಕ್ಕಿತು.

—ಸಂತೋಷ! ಅಲ್ಲಿ ಎಲ್ಲಿ?

—ಗೊಬ್ಬರದ ಕಾರ್ಖಾನೆಯಲ್ಲಿ.

—ಅಯ್ಯೋ! ಪಾಪ!

—ಹಾಗಲ್ಲ, ಹಾಗಲ್ಲ; ಪಾಪ ಅನ್ನಬೇಡಿ, ಅದು ಸೀಮೆಗೊಬ್ಬರ!

—ಓಹೋ! ತಿಳಿಯಲಿಲ್ಲ. ಯಾವುದಾದರೇನು, ಗೊಬ್ಬರ ಗೊಬ್ಬರವೇ ಅಂತಿದ್ದೆ.

—ಬಿ ಎಸ್. ಸಿ. ಮಾಡಿದ ನನ್ನ ಮೊಮ್ಮಗ........ಅಲ್ಲಿ ೩೫ ರೂಪಾಯಿ ಕೊಡುತ್ತಾರಂತೆ. ಸದ್ಯಕ್ಕೆ ಈ ಯುದ್ಧ ನಿಲ್ಲದೆ ಹೋದರೆ ಕೊಂಚ ವರ್ಷ, ಆದೊಂದು ಆರೋ, ಏಳೋ ಕೂಡಿಬರುತ್ತೆ. ಅವನಿಗೆ ಒಂದು ಸೈಕಲ್ ಬೇಕು, ಅಂದ.

ನನ್ನದು ಅಂತ ಅವನ ಕೈಗೆ ಅರವತ್ತು ರೂಪಾಯಿ ಕೊಡೋಣ ಅಂತ ಹೊರಟೆ........ಸ್ವಲ್ಪ ನೀರು ತರಿಸಿ........ಸುಸ್ತು........

—ನಾನೇ ತರುತ್ತೇನೆ........ಮನೆಯಲ್ಲಿ ಹುಡುಗರಾರೂ ಇದ್ದಹಾಗಿಲ್ಲ.......ತಗೊಳ್ಳಿ ಮನೆ ಬಾವೀದು........ಬಲು ತಂಪು ಹಾಳಾದ್ದು........

—ಅಲ್ಲಾ, ಪುಟ್ಟೇಗೌಡರೇ! ನಮ್ಮ ಕಾಲದಲ್ಲಿ ಸೈಕಲ್ಲೂ ಇಲ್ಲ; ಮೋಟಾರುಕಲ್ಲೂ ಇಲ್ಲ! ಬರೀ ನಡೆಗಲ್ಲೇ ಅಲ್ಲವೇ? ಬೆಳಗೊಳಕ್ಕಲ್ಲ, ಶ್ರವಣಬೆಳಗೊಳಕ್ಕಾದರೂ ನಾವು ನೆಟ್ಟಗೆ ನಡೆದೇ ಹೋಗುತ್ತಿದ್ದೆವಲ್ಲಾ! ಈಗಿನ ಕಾಲದ ಹುಡುಗರಿಗೆ ತುಳಿಯುವ ಆಸೆ! ಅಷ್ಟೆ!.......ಬರೀ ಹೆಣ್ಣಿಗರ ಹಾಗೆ ತಲೆ ಬಾಚಿಕೊಂಡು ಲೋ! ಅಮ್ಮಾ! ಹಲೋ, ಹಲೋ ಅಂದುಕೊಂಡು ಒಬ್ಬರಿಗೊಬ್ಬರು ಹೆಗಲಮೇಲೊರಗಿಕೊಂಡು........

—ತಮ್ಮಯ್ಯನವರೇ! ನೀರು ಕುಡಿಯಿರಿ!

—ಬಂದೆ! ತಮಗೆ ಮಕ್ಕಳೆಷ್ಟು?

—ಒಬ್ಬನೇ ಒಬ್ಬ.

—ಸದ್ಯಃ, ದೇವರು ಅಷ್ಟಕ್ಕೇ ನಿಲ್ಲಿಸಿದನಲ್ಲಾ;

—ಹಾಗಲ್ಲ! ಅವನಿಗೆ ಆರು ತಿಂಗಳಾದಾಗ ಆಕೆ ತೀರಿಕೊಂಡಳು.

—ಪುನಃ.......ಇಲ್ಲ ತಾನೆ!

—ಯಾಕೆ?

—ಅಯ್ಯೋ! ಈಗಿನ ಕಾಲದ ಹುಡುಗರ ಅವಲಕ್ಷಣ ನೋಡಿದರೆ, ಸಾಕಪ್ಪ ಅನ್ನಿಸುತ್ತದೆ.

—ನನಗೆ ಹಾಗನ್ನಿಸಲಿಲ್ಲ ತಮ್ಮಯ್ಯನವರೇ!

—ಹಾಗಾದರೆ,........?

—ಊಂ.

—ಅದರಲ್ಲೆಷ್ಟು?

—ಐದು ಹೆಣ್ಣು.

—ಐದೂನು........?

—ಹೆಣ್ಣು!

—ಬಹಳ ಹುಷಾರಾಗಿರಬೇಕು ನೀವು, ಪುಟ್ಟೇಗೌಡರೇ! ಈಗಿನ ಕಾಲದಲ್ಲಿ ನಮ್ಮ ನಮ್ಮವರಲ್ಲೂ ಕೂಡ ಸೊಟ್ಟ ಬೈತಲೆಗಳೂ, ಬಿಟ್ಟಿನ ಮೋರೆಗಳೂ ಕಾಸಿಗೆ ಒಂದು ಕೊಸರಿಗೆ ನಾಲ್ಕು........ನಮ್ಮ ಮನೆ ಮುಂದಿನ ರಸ್ತೆಯಲ್ಲೇ ಹೋಗುತ್ತವೆ ದಿನಾಲು ಸ್ಕೂಲಿಗೆ........ನಿಮ್ಮವರು ಸ್ಕೂಲಿಗೆ ಹೋಗುತ್ತಾರೋ?

—ಉಂಟೆ? ಎಲ್ಲಾದರೂ!

—ಅಯ್ಯೊ, ಅಯ್ಯೋ, ಈಗಿನ ಕಾಲದ ಹುಡುಗಿಯರ ಉಡಿಗೆ, ತೊಡಿಗೆ, ಕಿಲಕಿಲ ನಗಾಟ, ಕಾಸ್ ಪೀಸ್ ಮಾತುಗಾರಿಕೆ, ಬರೀ ಗೆಣ್ಣಿಗಿತ್ತಿಯರು!........ ಅವರನ್ನೆಲ್ಲಾ ಬೇಗ ಬೇಗ ಒಪ್ಪಿಸಿಬಿಡಿ ಅವರವರ ಯಜಮಾನರ ಹತ್ತಿರ....

—ಒಪ್ಪಿಸದೆ?

—ಸರಿ! ನಾನಿನ್ನು ಬರಲೇ!........ಒಂದು ಚಿಟಕಿ ಕೊಟ್ಟಿರಿ........ಇನ್ನೆಂದು ಭೇಟಿಯಾಗುವುದೋ ಕಾಣೆ! ಈಚೆಗೆ ನಡೆಯುವುದೇ ಕಮ್ಮಿ........ಗಾಡಿ ಇಲ್ಲದೆ ವಿಧಿಯಿಲ್ಲ........ಬರ್ತೀನೆ........

—ಹೋಗಿಬನ್ನಿ........ಸದ್ಯಃ, ತೊಲಗಿತು. ಗೆಣ್ಣಿಗರಂತೆ, ಹೆಣ್ಣಿಗರಂತೆ! ನಾವು ಮಾತಾಡುತ್ತಿದ್ದಾಗ ನಮ್ಮ ಕೆಂಪಣ್ಣ ಬಂದುಬಿಟ್ಟಿದ್ದರೆ ಗತಿ ಏನು ಅಂತಿದ್ದೆ. ನಮ್ಮ ಹುಡುಗಿಯರು ಯಾರಾದರೂ ಬಂದುಬಿಟ್ಟಿದ್ದರೆ ಗತಿ ಏನು ಅಂತ ಹೆದರಿದ್ದೆ. ಅವರು ಬೈದಿದ್ದರೆ,........ನಾನು........"ಸಾಕು ಸುಮ್ಮನಿರಿ! ತಮ್ಮಯ್ಯನವರೇ! ನಿಮ್ಮ ಮನೆ ಹೆಣ್ಣಿಗರನ್ನ ಮೊದಲು ತಿದ್ದಿ" ಅಂತ ಅಂದುಬಿಡುವೆ, ಅನ್ನಿ! ಅಷ್ಟೆ!........

—ಗಂಗಾಧರ.

—o—

ನಮ್ಮ ವಿಶ್ವವಿದ್ಯಾನಿಲಯದ ಎಲ್ಲಾ ಪರೀಕ್ಷೆಗಳಿಗೂ ಕೂಡುವ ಎಲ್ಲಾ ಕೋಮಿನ ಎಲ್ಲಾ ವಿದ್ಯಾರ್ಥಿಗಳೂ ಉತ್ತೀರ್ಣರಾಗುವ ತನಕ ಉತ್ತರ ಪತ್ರಿಕೆಗಳನ್ನು ಪುನಃ ಪುನಃ ಪುನರ್ವಿಮರ್ಶಿಸಲಾಗುವುದು ಎಂಬ ಸುದ್ದಿ ಸುಳ್ಳಂತೆ.

* *

ನನ್ನ ಚಿನ್ನಿ

(ನನ್ನಾಕೆಯ ಆಗ್ರಹಾನುಗ್ರಹ ಪಡೆದು)

'ನನ್ನ ಚಿನ್ನಿ'; 'ನನ್ನೆಂಡ್ತಿ'
'ನನ್ಚಿನ್ನ'; 'ನನ್ನಾಕೆ'
'ನನ್ನೆಂಗ್ಸು'; 'ನಮ್ಮವಳು';
ಯೆಂಗೆಂಗೊ ಕರಿತೀನಿ
ಕೈ ಹಿಡಿದ ಹೆಣ್ಣನ್ನ,
ಮನ್ಸೆಲ್ಲ ಬಲ್ರೊಗಸು
ಮಾತೊಂದೆ ಬಲ್ಗಡಸು,
ಆದ್ರೂವೆ ನಂನಂಗೆ
ಬಲು ಅಚ್ಚು ಮೆಚ್ಚು.

ನೆಗ್ ನೆಗ್ತಾ ಕರಿತೀನಿ,
'ನನ್ಚಿನ್ನ', 'ನನ್ನ ಚಿನ್ನಿ';
ಮುನ್ಸ್ಕೊಂಡು ಬೋತೀನಿ,
'ಬೆಪ್ತಕಡಿ', 'ಬಾಯ್ಬಡಿಕಿ';
ಯೆಂಗಂದ್ರು ಯೇನಂದ್ರು
ನೆಗ್ ನೆಗ್ತಾ ನೋಡ್ತಾಳೆ;
ಕಾಸ್ಮಾತ್ರ ಕೇಳ್ತಾಳೆ,
'ಕೊಡಲೊಲ್ಲೆ' ಎಂದಾಗ
ಮುನ್ಸ್ಕೊಂಡು ಕೂಗ್ತಾಳೆ,
ನನ್ನ ಚಿನ್ನಿ ಮುನ್ಕೊಂಡ್ರೆ
ನೋಡೋಕೆ ಬಲ್ರೊಗಸು!
ಮಾತೊಂದೆ ಬಲ್ಗಡಸು,
ಬಲ್ಗಡಸು, ಬಲ್ಗಡಸು!
ಆದ್ರೂವೆ ನಂನಂಗೆ
ಬಲು ಅಚ್ಚುಮೆಚ್ಚು.

ತಿಂಗ್ಳೆಲ್ಲ ನಾದುಡ್ದು
ತಂದೆಲ್ಲ ಕೊಟ್ರೂವೆ,
'ಇಷ್ಟೇನ?' ಅಂತಾಳೆ;
'ಎಷ್ಟ್ಬಂತು? ಎಷ್ಕೊಟ್ಟೆ?
'ಎಷ್ಟೈತೆ ನಿನ್ಹತ್ರ?'

ಎಂದ್ಲೆಕ್ಕ ಕೇಳ್ತವ್ರೆ !
‘ಎಲ್ಲಾನು ಕೊಟ್ಟೆಟ್ರಿ
‘ಏನ್ಮಾಡ್ಲಿ ನನ್ಕರ್ಚ್ಗೆ?’
ಎಂದ್ಮಾನು ಕೇಳ್ವಾಗ
ರೇಗ್ತಾಳೆ ನನ್ಹೆಂಗ್ಸು :
‘ಹಿಟ್ಮಾಡಿ ಹಾಕ್ತೀನಿ,
‘ರೊಟ್ಟೀನು ಕೊಡ್ತೀನಿ,
‘ಇನ್ನೇನ ನಿನ್ಕರ್ಚು ?
‘ಹೊಸ ಜುಬ್ಬ, ಹೊಸಚೆಡ್ಡಿ,
‘ವರ್ಷಕ್ಕೆ ಎಳ್ಕೊಡ್ಬೇಡಿ,
‘ನಿಂಗ್ಯಾಕ ಇನ್ಕರ್ಚು ?
‘ನೀನೇನು ದೊರೆ ಮಗನ ?’
ಅಂತಾಳೆ ನನ್ಚಿನ್ನ ;
ತಾನ್ಮಾತ್ರ ಉಡ್ತಾಳೆ
ಹಬ್ಬ ಹಬ್ಬಾಕ್ಕೆ ಹೊಸ ಸೀರೆ !

ಮೂವತ್ತು ವರ್ಸಾಗಿ
ಮೂರ್ಮಕ್ಳ ತಾಯಾದ್ರೂ
ಹೊಸ ಸೀರೆ ಉಟ್ವಾಗ
ನೋಡ್ಬೇಕು ಆ ಠೀವಿ,
ಆ ಬೆಡಗು, ಆ ಬಿಂಕ,
ಬಲ್ನೊಗಸು, ಬಲ್ನೊಗಸು !
‘ಏನ್ಲಚ್ಮಿ; ಬೇ ಚಿನ್ನ’
ಎಂದ್ಮಾನು ಹಲ್ಕಿರಿದು
ಹತ್ರಕ್ಕೆ ಕರೆದಾಗ
ನೋಡ್ಬೇಕು ಆ ಸಿಟ್ಟು ;
ಕಳ್ಕೋಪ, ಆರೆಮುನಿಸು !
‘ಮುಟ್ಬೇಡ, ಒಳ್ಗೋಗು,’
ಅಂತಾಳೆ ; ನನ್ದೇವ್ರು !
ನನ್ಚಿನ್ನ, ನನ್ಹೆಂಗ್ಸು ;
ಮನ್ಸೆಲ್ಲ ಬಲ್ನೊಗಸು,
ಮಾತೊಂದೆ ಬಲ್ಗಡಸು ;
ಆದ್ರೂವೆ ನಂನಂಗೆ
ಬಲು ಅಚ್ಚು ಮೆಚ್ಚು.

ಹಂಗಾಗಿ ಹಿಂಗಾಗಿ
ನಂಗೇನ ಸಿಟ್ಬತ್ತಿ,
ಹೊತ್ಮುಳುಗಿ ಕತ್ಲಾಗಿ
ಹೊತ್ಮಾಡಿ ಹಸ್ಕೊಂಡು
ಹಟ್ಟೀಗೆ ನಾಬಂದ್ರೆ,
ಹೊಸ್ಲಿಂದ ಹೊರಗ್ಬಂದು
ಬಾಕ್ಲಲ್ಲೆ ನಿಂತ್ಕೊಂಡು
ಬಂದ್ಹಂಗೆ ಬೊಯ್ತಾಳೆ:
'ಯಾಕಿಷ್ಟು ಹೊತ್ಮಾಡ್ದಿ?
'ಎಲ್ಲಿದ್ದಿ? ಏನ್ಮಾಡ್ದಿ?
'ಲಿಂಗಿ ಮನ್ಗೆ ಓಗಿದ್ಯಾ?
'ಅವಳಿದ್ಲ ಹಟ್ಟೀಲಿ?
'ಆ ರಂಡೆ ಬರಲಿಲ್ಲಿ
'ನೋಡ್ತೀನಿ ಹುಟ್ದಬ್ಬ;
'ನಡಿ ಒಳಗೆ; ನಿನ್ಮೊಕ್ಕೆ
'ಮಂಗ್ಳಾರ್ತಿ ಮಾಡ್ತೀನಿ';
ಎಂದ್ರುಂಪ ಮಾಡ್ತಾಳೆ;
ನನ್ನಾಕೆ, ನನ್ಹೆಂಗ್ಸು;
'ಬೊಯ್ಬೇಡ, ದಮ್ಮಯ್ಯ!
ಎಂಬ್ನಾನು ಬೇಡ್ಕೊಂಡ್ರೆ,
'ಜೈಗೃಲ್ಲ, ಬೆಪ್ಪುಕಡಿ,
'ಬುದ್ವಾದ' ಅಂತಾಳೆ
ನನ್ನಾಕೆ, ನನ್ಚಿನ್ನ,
ನನ್ಹೆಂಗ್ಸು, 'ಹೆಣ್ಹೆಂಗ್ಸು'!
ಮಾತೊಂದೆ ಬಲ್ಗಡಸು,
ಬಲ್ಗಡಸು, ಬಲ್ಗಡಸು.
ಆದ್ರೂವೆ ನಂನಂಗೆ
ಬಲು ಅಚ್ಚು ಮೆಚ್ಚು.

ಬಾಯ್ಬುಟ್ರೆ ಬಣ್ಗೇಡು,
ಎಂದ್ಕೊಂಡು ನಾಸುಮ್ಗೆ
ಒಳ್ಗೋಗಿ, ಕೈ ತೊಳೆದು
ಕುಂತೊಡನೆ ತರ್ತಾಳೆ,
ಒಂದ್ತಣಿಗೆ ಬಿಸಿಹಿಟ್ಟು

ಬಿಸಿ ಬಿಸಿ ಉಪ್ಪಂಬ್ಲಿ
ಸೊಪ್ಪುದಕ, ಒಂದಿಷ್ಟು
ನವಣಕ್ಕಿ ಪರಮಾನ್ನ !
'ನ.... ನ್ನ.... ಅ.... ಲ್ಕಣೆ,
'ಇ.... ಲ್ಕಣೆ—ಇ— ದೇನೆ !
'ಇಂದೇನು ಪರಮಾನ್ನ !?
'ಬೋಗ್ಗೆಲ್ಲ ಬೋದ್ಬಿಟ್ಟು,
'ಪಾಯ್ಸಾನು ಬಡ್ಸಿ್ತೀಯೆ ?
'ಯೆಂಗುಂಣ್ಲೆ ಪಾಯ್ಸಾನ
'ನಿಂಗ್ಸಿಟ್ಟು ಬಂದಾಗ ?'
ಎಂದಾಗ ನೇಗ್ ನೇಗ್ತ
ನನ್ಚಿನ್ನ ನುಡೀತಾಳೆ:
'ಮತ್ತೇನ ನಿನ್ಹಂಮು ?
'ಮನೆಯಾಕೆ ಮಾತ್ಗಿಲ್ಲ
'ಮುನ್ನೊಂಡು ಓಗೋದ ?
'ಗಂಡ್ಸಂತೆ, ನಾಚ್ಕಿಲ್ಲ !
'ಗಂಡ್ಹೆಂಡ್ರು ಅಂದ್ರೇನ ?
'ರೇಗ್ಬೇಕು, ಕೂಗ್ಬೇಕು,
'ಬಾಯ್ತುಂಬ ಬೊಯ್ಬೇಕು,
'ಸಂಸಾರ ಮಾಡ್ಬೇಕು,
'ಮಕ್ಕಮ್ರೀ ನ್ಸಾಕ್ಬೇಕು;
'ಅದೀಗ ಚೆಂದಲ್ವಾ ?
'ನಿಂಗೇನು ತಿಳೀತೈತೆ ?
'ಗಂಡ್ಜಾತಿ ನಿಂದಲ್ವಾ !
'ದನದಂತೆ ದುಡಿಯೋದು
'ದನದಂತೆ ತಿಂಬೋದು,
'ಎರಡಲ್ದೆ ಏನ್ಗೊತ್ತು ?
'ಭಂಡ್ಜಾತಿ ಗಂಡ್ಜಾತಿ !'
ಅಂದ್ಬಿಟ್ಲು ನನ್ಹೆಂಗ್ಸು;
ನನ್ನಾಕೆ, ನನ್ನಚ್ಚಿ
ಮಾತೆಲ್ಲ ಬಲ್ಗಡಸು
ಮನಸ್ನೊಂದೆ ಬಲ್ಸೊಗಸು.

ನನ್ಚಿನ್ನ ಮುನ್ಸ್ಕೊಂಡ್ರೆ
ಪರ್ಪಂಚ ತಲ್ಕೆಳಕು!
ನಂಗ್ಮಾತ್ರ, ತಲ್ಕೆಳಕು!
ಎಷ್ಟಾದ್ರು ಏನಾದ್ರು
ನಾವ್ನಾವು ಗಂಡ್ಹೆಂಡ್ರು
ನಂನಂಮ ಜಗಳ್ವಿಲ್ಲ
ಉಂಡ್ಮಲಗೊ ತನ್ಕಾನೆ!

—ಬುಳ್ಳ.

—o—



ತಮ್ಮ ಕೆಳಗೆ ಕೆಲಸ ಮಾಡುವವರು

"……ಇನ್ನು ಎರಡು ಸಾರಿ ಸುತ್ತಿಸಿದರೆ ಖಂಡಿತ ಪ್ರಮೋಷನ್ ಮಾಡಿಸ್ತೀರಾ ಸಾರ್……"

"ನಾನಾಗಿದ್ದಿದ್ದರೆ....!"

"ಏನು ಕಿಟ್ಟೂ, ಹಾಗೆಯೇ ನೋಡಿದರೂ ನೋಡದವನಂತೆ ಹೊರಟು ಹೋಗುತ್ತಿದ್ದೀಯಲ್ಲಾ! ನಿನ್ನನ್ನು ಕಂಡು ಎಷ್ಟು ದಿವಸಗಳಾಗಿ ಹೋಯಿತು! ಹೇಗಿದೆ, ವಿಚಾರಗಳೆಲ್ಲಾ"

"ಸ್ವಲ್ಪ ಕೆಲಸವಾಗಿ ಹೊರಟಿದ್ದೆ, ಶ್ಯಾಮಯ್ಯಾ. ಏನೋ ಯೋಚನೆ ಮಾಡುತ್ತಾ ಹೋಗುತ್ತಿದ್ದುದರಿಂದ ನಿನ್ನನ್ನು ಕಾಣಲಿಲ್ಲ, ಕ್ಷಮಿಸು ವಿಚಾರ ಗಳೇನು—ಎಲ್ಲಾ ಯಥಾಪ್ರಕಾರವೇ."

"ಕೋರ್ಟಿನಲ್ಲಿ ನಡೆಯುತ್ತಿದ್ದ ಆ ನಿಮ್ಮ ವ್ಯಾಜ್ಯ ಏನಾಯಿತು?"

"ಇನ್ನೂ ನಡೆಯುತಲೇ ಇದೆ. ಲಾಯರಿಗೆ ಫೀಜು ಕಟ್ಟುವುದು, ಸಾಕ್ಷಿ ಗಳಿಗೆ ಭತ್ಯ ಕಟ್ಟುವುದು, ದಿನ ಬೆಳಗಾದರೆ ಕೋರ್ಟುಬಾಗಿಲು ಕಾಯುವುದು, ಇದೇ ಆಗಿದೆಯಪ್ಪ!"

"ಆಗಲೇ ಎಷ್ಟು ದಿವಸಗಳಾಗಿ ಹೋಯಿತಯ್ಯಾ! ಹೇಗಾದರೂ ಮಾಡಿ ರಾಜಿಯೋ ಏನಾದರೂ ಮಾಡಿಕೊಳ್ಳುವುದಕ್ಕಾಗುವುದಿಲ್ಲವೆ? ಅಣ್ಣ ತಂಮ್ಮಂದಿರಲ್ಲಿ ಇದೆಂತಹ ಹೊಡೆದಾಟ!"

"ಏನು ಮಾಡುವುದು? ರಾಜಿಗೆ ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದಾ ಯಿತು, ಉಪಯೋಗವಾಗಲಿಲ್ಲ. ಹಣೇ ಬರಹ!"

"ಹಣೇ ಬರಹ ಎಂದರೇನಯ್ಯಾ! ಇವೆಲ್ಲಾ ನಮ್ಮ ಕೈಯಲ್ಲಿದೆ. ಸುಮ್ಮನೆ ಕೈಲಾಗದಿದ್ದಕ್ಕೆ ಹಣೇಬರಹನ್ನೇಕೆ ದೂಷಿಸಬೇಕು? ಏನೋಪ್ಪ, ನಾನಾಗಿದ್ದಿದ್ದರೆ ....ಇದನ್ನೆಲ್ಲಾ ಒಂದು ನಿಮಿಷಕ್ಕೆ ಸರಿಮಾಡಿಬಿಡುತ್ತಿದ್ದೆ!........"

*　　　*　　　*

"ಏನು ಶ್ಯಾಮಯ್ಯಾ, ನಿನ್ನ ಹನುಮಂತನ ಬಾಲವನ್ನು ಇಲ್ಲೂ ಬಿಚ್ಚಿ ಬಿಟ್ಟಿದ್ದೀಯೆ! ನಿನ್ನ ಉಪನ್ಯಾಸ ಅರ್ಧ ಮೈಲಿ ಕೇಳಿಸುತ್ತಿತ್ತಲ್ಲಾ!"

"ಓಹೋ ಬಾ, ನೆಲ್ಲಪ್ಪಾ, ಏನು, ನೀನೂ ಅಕ್ಕಿಗೆ ಬಂದೆಯಾ? ಉಪನ್ಯಾಸ ವೇನೂ ಇಲ್ಲವಪ್ಪ; ಇದೇ ನಮ್ಮ ಕಿಟ್ಟೂಗೆ ಅವರ ಅಣ್ಣ ತಮ್ಮಂದಿರ ವ್ಯಾಜ್ಯದಲ್ಲಿ ಗಂಟು ಮಾಯವಾಗುತ್ತಿದೆಯಲ್ಲ. ರಾಜಿ ಯಾತಕ್ಕೆ ಮಾಡಿಕೊಳ್ಳಬಾರದು ಎಂದು ಹೇಳುತ್ತಿದ್ದೆ, ಅಷ್ಟೆ. ಅದು ಹಾಗಿರಲಿ, ನಿನಗೇನು ಬೇರೆ ಮನೆ ಸಿಕ್ಕಿತೆ—ಹುಡುಕು ತ್ತಿದ್ದೆಯಲ್ಲ?"

"ಇನ್ನೂ ಸಿಕ್ಕಿಲ್ಲ, ರಾಮಯ್ಯ. ಹುಡುಕಿ, ಹುಡುಕಿ, ಅಲೆದೂ, ಅಲೆದು ಸಾಕಾಗಿ ಹೋಗಿಬಿಟ್ಟಿದೆ, ನೋಡು. ಅದೇನು ದೇವರು ನಮಗೇಂತ ಮನೆ ಮಾಡಿಟ್ಟಿಲ್ಲವೋ, ಇಲ್ಲ ಮನೇಗೆ ಅಂತ ನಾವು ಹುಟ್ಟಿಲ್ಲವೋ ಒಂದೂ ತಿಳಿಯದು!"

"ಇದೇನು ನಾಚಿಕೆಗೇಡು, ನೆಲ್ಲಪ್ಪ! ಅಷ್ಟು ದಿವಸಗಳಿಂದ ಒಂದೇ ಊರಿನಲ್ಲಿದ್ದೀಯೆ, ಒಳ್ಳೆ ಸಂಪಾದನೆ ಮಾಡುತ್ತಿದ್ದೀಯೆ, ಇಷ್ಟಾದರೂ ಒಂದು ಸ್ವಂತ ಮನೆ ಮಾಡಿಕೊಂಡಿಲ್ಲವಲ್ಲ—ಸ್ವಲ್ಪವೂ ಮುಂದಾಲೋಚನೆಯೇ ಬೇಡವೆ?"

"ನೋಡಪ್ಪ, ಸಾಧ್ಯವಾಗಿಲ್ಲವಲ್ಲ! ಸಾಧ್ಯವಾಗಿದ್ದಿದ್ದರೆ, ಹೀಗೆ ನಾಯಿ ಅಲೆದ ಹಾಗೆ ಅಲೆಯುತ್ತಿದ್ದೆನೆ?"

"ಸಾಧ್ಯವಿಲ್ಲವೆಂದರೇನಯ್ಯ? ಮಾಡಿಕೊಂಡರೆ ಎಲ್ಲಾ ಸಾಧ್ಯವೇ. ಅದೇ ನಮ್ಮ ಪುಟ್ಟಸಾಮಿಯನ್ನು ನೋಡು—ನಿನಗೆ ಬರೋ ವರಮಾನದಲ್ಲಿ ಕಾಲುಭಾಗ ಬರುತ್ತೋ ಇಲ್ಲವೋ—ಆದರೂ ಅರಮನೆಯಂಥ ಮನೆ ಹ್ಯಾಗೆ ಕಟ್ಟಿಸಿದ್ದಾನೆ! ಎಂಥಾದ್ದು ಇದು—ನಾನು ನೋಡಿದ ಹಾಗೆಯೇ ನಾಲ್ಕು ಮನೆಗಳಾಯಿತು. ನೀನು ಬದಲಾಯಿಸಿದ್ದಿದ್ದು!"

"ಅದಕ್ಕೇನು ಮಾಡುವುದು? ಅಲ್ಲ ಶ್ಯಾಮಯ್ಯಾ, ಆ ಸೂರ್ಯ ಚಂದ್ರಾದಿಗಳೇ ಮನೆಯಿಂದ ಮನೆಗೆ ಸುತ್ತುತ್ತಾರಂತೆ, ಜ್ಯೋತಿಷ್ಯದ ಪ್ರಕಾರ! ನಮ್ಮಂತವರ ಪಾಡೇನು? ಹೊತ್ತಾಯಿತು, ಬರುತ್ತೀನೆ......."

"ಎಲ್ಲಾ ಪರಿಹಾಸ್ಯವೇ, ನಿನಗೆ, ಮುಂದಾಲೋಚನೆ ಇರಬೇಕು. ನಾನಾಗಿದ್ದಿದ್ದರೆ........!"

*　　　*　　　*

"ಯಾರು, ಭಟ್ಟರೆ, ಅಲ್ಲಿ ಹೋಗುತ್ತಿರುವುದು? ಬನ್ನಿ, ಬನ್ನಿ. ಏನು ನಿಮ್ಮ ಮಗಳು ಕಾಲೇಜಿಗೆ ಸೇರಿದಳಂತಲ್ಲಾ? ಈ ವರ್ಷ ಅವಳಿಗೆ ಮದುವೆ ಅಂದುಕೊಂಡಿದ್ದೆ!"

"ಇಲ್ಲ, ಶ್ಯಾಮಯ್ಯಾ—ಇನ್ನೂ ವರ ಎಲ್ಲಿಯೂ ಗೊತ್ತಾಗಿಲ್ಲ. ಲಗ್ನಕ್ಕೇನೊ ಎಲ್ಲ ಸಿದ್ಧತೆಯೂ ಆಗಿದೆ. ಆದರೆ, ವರನ ವಿನಾ ಕನ್ಯಾದಾನವೆಲ್ಲಿ ಬಂತು? ಆದುದರಿಂದ ವರ ಸಿಕ್ಕುವವರೆಗೂ ಕಾಲೇಜಿಗೆ ಹೋಗಿ ಬರಲಿ ಎಂದು ಸೇರಿಸಿದೆ."

"ಎಲ್ಲರಿಗೂ ಶಾಸ್ತ್ರ ಹೇಳುವ ನೀವೇ ಹೀಗೆ ಉಪೇಕ್ಷೆ ಮಾಡಿಬಿಟ್ಟರೆ ನಮ್ಮ ಪುರಾತನ ಪದ್ಧತಿಗಳು ಉಳಿಯುವುದು ಹೇಗೆ, ಭಟ್ಟರೆ? ನನ್ನನ್ನು ನೋಡಿ, ನಮ್ಮ ಹಿರಿಯ ಹುಡುಗನಿಗೆ ಹದಿನೆಂಟನೆಯ ವಯಸ್ಸಿಗೇ ಹೇಗೆ ಹಾರ ಹಾಕಿಸಿಬಿಟ್ಟೆ!"

"ಅಪ್ಪಾ, ನೀನು ಗಂಡು ಹೆತ್ತ ಪುಣ್ಯವಂತ. ನಿನಗಿದೆ—ಬಲ! ನೀನೆಲ್ಲಿ, ನಾಲ್ಕು ಹೆಣ್ಣು ಹೆತ್ತ ನಾನೆಲ್ಲಿ? ಅಲ್ಲದೆ, ಎಲ್ಲಕ್ಕೂ ವೇಳೆ ಕೂಡಿ ಬರಬೇಕಲ್ಲಾ!"

"ಗಂಡು ಹೆತ್ತರೇನು, ಹೆಣ್ಣು ಹೆತ್ತರೇನು, ಬರೀ ಸಪಗಳು ಇವೆಲ್ಲಾ, ಅಷ್ಟೆ, ಪ್ರಪಂಚವನ್ನು ತಲಕೆಳಗಾದರೂ ಮಾಡಿ, ತಕ್ಕ ಕಾಲದಲ್ಲಿ ನಡೆಸಬೇಕಾದಂಥ ವಿಚಾರಗಳಲ್ಲವೆ, ಇವೆಲ್ಲಾ ? ಏನಾದರೂ ಹೇಳಿ—"

"ಬಾಯಲ್ಲಿ ಹೇಳುವುದು ಸುಲಭ, ಶ್ಯಾಮಯ್ಯ! ಮಾಡಬೇಕಾಗಿ ಬಂದರೆ ಆಗ ಗೊತ್ತಾಗುತ್ತೆ ಅದರ ಕಷ್ಟ. ಪ್ರಪಂಚವನ್ನು ತಲೆಕೆಳಗೆ ಮಾಡುವುದರಲ್ಲಿ ನಾವೇ ತಲೆಕೆಳಗಾಗಬೇಕಾಗುತ್ತೆ, ಅಷ್ಟೆ!"

"ಬರೀ ಮಾತುಗಳು, ಭಟ್ಟರೆ! ಪ್ರಯತ್ನ ಪಟ್ಟರೆ ಆಗದೇ ಇರುವ ಕೆಲಸ ಯಾವುದಿದೆ? ಮುಂದೆ ನುಗ್ಗಿ ಮಾಡಬೇಕು—"ಉದ್ಯೋಗಿನಂ ಪುರುಷಸಿಂಹಂ"— ಗೊತ್ತಿದೆಯಲ್ಲ. ನಾನಾಗಿದ್ದರೆ........!"

ಶ್ಯಾಮಯ್ಯನವರ ಜತೆಯಲ್ಲಿ ಬೆಳಿಗ್ಗೆ ಎದ್ದು ಹೊರಟುಬಿಟ್ಟರೆ, ಕೈಕೊಂಡ ಕೆಲಸ ಪೂರೈಸದಿದ್ದರೂ, ಪ್ರಪಂಚದ ಅನುಭವ ಚೆನ್ನಾಗಿ ಸಿಗುತ್ತೆ. ಜೀವನದ ತೊಡಕುಗಳನ್ನು ಎದುರಿಸಬೇಕಾದರೆ, ಅವರನ್ನು ಕೇಳಬೇಕು. ಇತರರ ತೊಡಕುಗಳು, ಅವರು ಎದುರಿಸುವ ರೀತಿ—ಅಲ್ಲಿಯೇ ಇರುವುದು ಸ್ವಾರಸ್ಯ! ಅವರು ನಮ್ಮ ಪಕ್ಕದ ಮನೆಯಲ್ಲಿಯೇ ಇರುವುದರಿಂದ ಇದು ನನಗೆ ಚೆನ್ನಾಗಿ ಅನುಭವವಾಗಿ ಬಿಟ್ಟಿದೆ—ತಪ್ಪಿಸಿಕೊಳ್ಳುವುದಕ್ಕೆ ಅವಕಾಶವೇ ಇಲ್ಲ. ಈವತ್ತು ಬೆಳಿಗ್ಗೆ ಬೇಗ ಹೋಗಿ ಸರ್ಕಾರಿ ಗಡಂಗಿನಲ್ಲಿ ಅಕ್ಕಿ ತೆಗೆದುಕೊಂಡು ಬರೋಣವೆಂದು ಹೊರಟೆ. ಬೀದಿಗೆ ಬಂದ ಒಡನೆಯೇ ಶ್ಯಾಮಯ್ಯನವರೂ ಹಾಜರು—ಕೈಲಿ ಚೀಲ ಹಿಡಿದು. ನನ್ನ ಅದೃಷ್ಟಕ್ಕೆ ಅವರೂ ಅಕ್ಕಿಗಾಗಿಯೇ ಹೊರಟಿದ್ದುದು! ಹೋಗುತ್ತಾ ದಾರಿಯಲ್ಲಿ ಕಂಡ ಕಂಡವರನ್ನೆಲ್ಲಾ ನಿಲ್ಲಿಸಿ ಅವರ ಸಮಾಚಾರಗಳನ್ನು ವಿಚಾರಿಸದೆ ಹೆಜ್ಜೆ ಹಾಕುವ ಪದ್ಧತಿಯೇ ಇಲ್ಲ. ಇದರಲ್ಲಿ ಬೆಳಿಗ್ಗೆ ಎಂಟು ಘಂಟೆಗೆ ಮನೆ ಬಿಟ್ಟದ್ದು, ಗಡಂಗಿನ ಬಳಿ ಬರುವ ವೇಳೆಗೆ ಹತ್ತೂವರೆ. ಅಲ್ಲಿಯೋ ಅತ್ಯಂತ ಗಲಾಟೆ. ಹೊರಗೇ ಕಾಯಬೇಕಾಯಿತು. ಕಾಯುತ್ತಿರುವಾಗಲೇ ಶ್ಯಾಮಯ್ಯನವರ ಮೇಲೆ ಕಂಡ ಸಂಭಾಷಣೆಗಳು. ಇಂಥವು ಎಷ್ಟೋ ನಡೆಯಿತು. ಆದರೆ, ಸ್ಥಾಲೀಪಾಕ ನ್ಯಾಯದಂತೆ ಕೆಲವನ್ನು ಮಾತ್ರ ಹೇಳಿದೇನೆ. ಈ ಮಾತುಕತೆಗಳಲ್ಲಿ ಹನ್ನೊಂದೂವರೆ ಆಯಿತು. ಗಡಂಗಿನಲ್ಲಿ ಸಂದಣಿ ಮಾತ್ರ ಕಡಿಮೆಯಾದಂತೆ ಕಂಡು ಬರಲಿಲ್ಲ. ಕಡೆಗೆ ಶ್ಯಾಮಯ್ಯನವರು "ಬಾ, ಮನೆಗೆ ಹೋಗೋಣ ಅಕ್ಕಿ ನಾಳೆ ತಂದರಾಯಿತು, ಎಲ್ಲಿ ಹೋಗುತ್ತೆ? ಈ ಗುಂಪಿನಲ್ಲಿ ನುಗ್ಗಿಕೊಂಡು ಹೋಗುವುದು ನನ್ನಿಂದಾಗುವುದಿಲ್ಲ. ಏನು ಅವಸ್ಥೆಯೋ, ಇದು. ಗಲಾಟೆಯಿಲ್ಲದೆ ಎಲ್ಲರಿಗೂ ಬೇಗ ಅಕ್ಕಿ ಸಿಕ್ಕುವಂತೆ ಮಾಡಬಾರದೆ? ಬೇಕು ಇದಕ್ಕೆಲ್ಲಾ ವ್ಯವಸ್ಥಾಶಕ್ತಿ. ನಾನಾಗಿದ್ದಿದ್ದರೆ........"

ಬಂದದಾರಿ ಹಿಡಿದು ಮನೆಗೆ ಹೊರಟೆವು. ಮನೆ ಹತ್ತಿರ ಬಂದಾಗ ಶ್ಯಾಮಯ್ಯನವರು "ಒಳಗೆ ಬಾ, ಒಂದು ಲೋಟ ಪಾನಕವನ್ನಾದರೂ ಮಾಡಿಸಿ

ಕುಡಿಯೋಣ—ಯಾಕೋ ಬಾಯಿ ಒಣಗುತ್ತಿದೆ" ಎಂದು ಒಲ್ಲೆನೆಂದರೂ ಬಿಡದೆ ಅವರ ಮನೆಯೊಳಕ್ಕೆ ಎಳೆದುಕೊಂಡು ಹೋದರು. ಪಾನಕ ಮಾಡುವುದಕ್ಕೆಂದು ಹೇಳುವುದಕ್ಕೆ ಒಳಗೆ ಹೋದಾಗ, ಅವರ ಹೆಂಡತಿಗೂ ಅವರಿಗೂ ನಡೆಯಹತ್ತಿದ ಸಂಭಾಷಣೆ ಸ್ವಷ್ಟ ಬಿರುಸಾಗಿಯೇ ಇದ್ದಹಾಗಿತ್ತು. ಕೊನೆಗೆ ಇಷ್ಟು ಮಾತ್ರ ಕೇಳಿ ಬಂತು:

"ಇದೇನು ಅಂದ್ರೆ, ನೂಕು ನುಗ್ಗಲು ಅಂತ ಈವತ್ತೂ ಅಕ್ಕಿ ತರದೆ ಬಂದಿದ್ದೀರಿ! ವಿಪಾಸೆ ಹೊತ್ತ ಗಂಡಸರಾಗಿ ಗುಂಪಿನಲ್ಲಿ ನುಗ್ಗುವುದಕ್ಕೆ ಹೆದರಿಕೆಯೆ? ಮಾತಿನ ಮಲ್ಲಪ್ಪನವರಾಗಿದ್ದೀರಿ, ಅಷ್ಟೆ! ಪಟ್ಟ ಕಷ್ಟಕ್ಕೆ ಪಾನಕ ಬೇರೆ! ನಾಚಿಕೆಗೇಡು. ನಾನಾಗಿದ್ದಿದ್ದರೆ.......!"

ಇದನ್ನು ಕೇಳಿ ನಾನು ಇನ್ನು ಪಾನಕಕ್ಕೆ ಕಾಯುವುದು ಪ್ರಯೋಜನವಿಲ್ಲವೆಂದು ಅಲ್ಲಿಂದ ಪಲಾಯನವಾದೆ. ಮನೆಗೆ ಬಂದು ನಮ್ಮಾಕೆಯ ಹತ್ತಿರ "ಗಡಂಗು ಈ ದಿವಸ ಬಾಗಿಲು ಹಾಕಿತ್ತು. ಬರ್ಮಾ—ಅಲ್ಲ, ಬೆಜವಾಡದಿಂದ ಇನ್ನೂ ಅಕ್ಕಿ ಬಂದೇಯಿಲ್ಲವಂತೆ. ಯಾವಾಗ ಬರುತ್ತೆ ಎಂಬುದನ್ನು ವಿಚಾರಿಸಿಕೊಂಡು ಬರುವುದರಲ್ಲಿ ಇಷ್ಟು ಹೊತ್ತಾಯಿತು" ಎಂದು ಹೇಳಿ, ಊಟಮಾಡಿ, ಕೆಲಸಕ್ಕೆ ಹೊರಟೆ. ಶ್ಯಾಮಯ್ಯನವರ ಮನೆಯಲ್ಲಾದರೋ ಅವರಾಕೆಯ ವಾಗ್ವಾದವು ಇನ್ನೂ ಕೇಳಿಸುತ್ತಲೇ ಇತ್ತು. ನಾನಂದುಕೊಂಡೆ: "ಇದೆಂತಹ ಪುರುಷತ್ವ ಇವರದು! ಅಷ್ಟೆಲ್ಲಾ ಹೇಳುತ್ತಾರೆ, ಆದರೆ ಹೆಂಡತಿಯಿಂದ ಅನ್ನಿಸಿಕೊಳ್ಳುತ್ತಾರೆ! ಹ್ಯಾಗೆ ಸಹಿಸುತ್ತಾನೋ ಮನುಷ್ಯ! ನಾನಾಗಿದ್ದಿದ್ದರೆ....... !"

"ದಕ್ಷಿಣ ಭಾರತದ ಚಲನಚಿತ್ರಗಳಲ್ಲಿ ಇದುವರೆಗೂ ನಾರದನ ಪಾತ್ರವನ್ನು ಸಮರ್ಪಕವಾಗಿ ನಟಿಸಿಲ್ಲ" ಎಂದು 'ಹಂಸ'ರು ಟೀಕಿಸುತ್ತಾರೆ. ತಯಾರಕರು, ದಿಗ್ದರ್ಶಕರು ಮುಂತಾದವರ ಗುಂಪಿನಲ್ಲಿ ಹತ್ತಾರು ಅಪ್ಪಟ ನಾರದರು ಇರುವಾಗ ಈ ಕೊರತೆಯನ್ನು ನಾವು ಶೀಘ್ರದಲ್ಲೇ ನಿವಾರಿಸಬಹುದು.

*　　　　*

"ಹರಿಶ್ಚಂದ್ರ ಚಿತ್ರದಲ್ಲಿ ಕಥಾನಾಯಕರು ತಮ್ಮ ಪಾತ್ರವನ್ನು ಅತ್ಯಮೋಘವಾಗಿ ಅಭಿನಯಿಸಿದಾರೆ" ಎಂದು ಒಬ್ಬರು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. ಅದರ ಕಥಾನಾಯಕರು ಯಾರು, ಎಂಬುದನ್ನು ಅವರು ಸ್ಪಷ್ಟಪಡಿಸದೆ ಇರುವುದು ಸೋಜಿಗದ ಸಂಗತಿ.

*　　　　*


ಮಕ್ಕಳಿಗೆ ಆರೋಗ್ಯವನ್ನು
ಕೊಡುತ್ತದೆ





ಕೇಸರಿ ಕುಟೀರಂ ಲಿ., ಮದರಾಸು

ಲೋಧ್ರ—ಗರ್ಭಾಶಯ ಟಾನಿಕ್

ಅಕ್ರಮ ಮುಟ್ಟು, ಬಂಜೆತನ, ಗರ್ಭವಾಯು, ನಿದ್ರಾಭಂಗ, ಅಜೀರ್ಣ, ಮಲಬದ್ಧತೆ, ಕೆಮ್ಮು, ತಲೆನೋವು, ಬೆನ್ನುನೋವು ಮುಂತಾದುವನ್ನು ವಾಸಿಮಾಡುವುದು.

ಅರ್ಕ—ಶ್ರೇಷ್ಠ ಜ್ವರ ನಿವಾರಿಣಿ

ಇನ್‌ಫ್ಲೂಯಂಜಾ, ಟೈಫಾಯಿಡ್, ಮಲೇರಿಯ ಮುಂತಾದ ಎಲ್ಲಾ ವಿಧವಾದ ಜ್ವರಗಳನ್ನೂ ಪ್ಲೀಹ ಮತ್ತು ಪಿತ್ತಕೋಶ ರೋಗಗಳನ್ನೂ ಗುಣಪಡಿಸುವುದು.

ಅಮೃತ—ರಕ್ತಶುದ್ಧಿ ಟಾನಿಕ್

ಎನೀಮಿಯ, ಮಲಬದ್ಧತೆ, ಅಜೀರ್ಣ, ನಿಶ್ಶಕ್ತಿ, ಬುದ್ಧಿಮಾಂದ್ಯ, ಎದೆಯ ನಿಶ್ಶಕ್ತಿ, ಜ್ಞಾಪಕಶಕ್ತಿ ಇಲ್ಲದಿರುವದು, ದೃಷ್ಟಿಮಾಂದ್ಯ, ತಲೆ ತಿರುಗುವುದು, ಚರ್ಮ ರೋಗಗಳು ಮುಂತಾದುವನ್ನು ವಾಸಿಮಾಡುವುದು.

ಏಜಂಟರು :

ಸಿಟಿ ಮೆಡಿಕಲ್ ಅಂಡ್ ಜನರಲ್ ಏಜನ್ಸಿ,

ಚಿಕ್ಕಪೇಟೆ, : : : ಬೆಂಗಳೂರು ಸಿಟಿ.

ಲಕ್ಷ್ಮಿ ಪ್ರೊಡಕ್ಷನ್ಸ್‌ರವರ

ಷರಾಫತ್

ಲೀಲಾ ದೇಸಾಯಿ, ಪಹಾರಿಸನ್ಯಾಲ್, ಜಗದೀಶ್

- ಇತ್ಯಾದಿ -

ಇವರ ಅಮೋಘ ಅಭಿನಯ

ಬೆಂಗಳೂರು ನಗರದ

ಪ್ಯಾರಮೌಂಟ್ ಥಿಯೇಟರಿನಲ್ಲಿ

ಡಿಸೆಂಬರ್ ಪ್ರಥಮ ವಾರದಲ್ಲಿ

ಪ್ರದರ್ಶನಾರಂಭ

ವಿವರಗಳಿಗೆ:

ಗುಡ್‌ವಿನ್ ಪಿಕ್ಚರ್ಸ್ ಕಾರ್ಪೊರೇಷನ್

ಸುಬೇದಾರ್ ಛತ್ರಂ ರಸ್ತೆ, ಬೆಂಗಳೂರು ಸಿಟಿ

ಅಲ್ಲದೆ, ಬೆಜವಾಡ — ತಿರುಚನಾಪಳ್ಳಿ — ಎರ್ನಾಕುಲಂ — ಶಾಖೆಗಳು.

— ಬರೆಯಿರಿ.

Printed by B. S. Iyengar, Bangalore City.
Publisher—B. N. Gupta, Editor—M. SHIVARAM.